Karnataka Biodiversity Board

Government of Karnataka

ಕರ್ನಾಟಕ ಜೀವವೈವಿಧ್ಯ ಮಂಡಳಿ

ಕರ್ನಾಟಕ ಸರ್ಕಾರ

# Defining and Explaining
# ABS Terminology

# ವ್ಯಾಖ್ಯಾನ ಮತ್ತು ವಿವರಣೆ
# ಜೈವಿಕ ಸಂಪನ್ಮೂಲಗಳ ‘ಬಳಕೆ ಮತ್ತು ಲಾಭಹಂಚಿಕೆ’ ಪರಿಭಾಷೆ

**ಕೃತಿಸ್ವಾಮ್ಯ :** ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, 2013

**ಪ್ರಕಟಣೆ (ಇಂಗ್ಲೀಷ್‌ನಲ್ಲಿ) :**
ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ,
5ನೇ ಮಹಡಿ, ಟಿಐಸಿಇಎಲ್ ಬಯೋಪಾರ್ಕ್
ಸಿಐಎಸ್‌ಐಆರ್ ರೋಡ್, ತಾರಾಮಣಿ
ಚೆನ್ನೈ – 600 113

**ಕನ್ನಡ ಅನುವಾದ:**

ಈ ಕೈಪಿಡಿಯನ್ನು UNEP-GEF-MoEF&CC ನ 'ಜೈವಿಕ ಅಧಿನಿಯಮ 2002 ಮತ್ತು ನಿಯಮಗಳ ಅಡಿಯಲ್ಲಿ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭ ಹಂಚಿಕೆಯ ಸಂಬಂಧಿತ ನಿಬಂಧನೆಗಳ ಜಾರಿ ಮತ್ತು 'ಸಾಮಥ್ಯ ವರ್ಧನೆ' ಯೋಜನೆಯ ನೆರವಿನಿಂದ ತಯಾರಿಸಲಾಗಿದೆ. ಈ ಕೈಪಿಡಿಯಲ್ಲಿ ನೀಡಿದ ಮಾಹಿತಿಯು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಪ್ರಕಟಣೆಯ ಅನುಸಾರವಾಗಿರುತ್ತದೆ. ನಾವು ವ್ಯಾಖ್ಯಾನಗಳನ್ನು ಭಾಷಾಂತರಿಸಲು ಬಹುತೇಕ ಕಾಳಜಿಯನ್ನು ತೆಗೆದುಕೊಂಡಿರುತ್ತೇವೆ ಹಾಗೂ ಅವುಗಳು ನಿಖರವಾಗಿ ಅರ್ಥೈಸುವಂತೆ ಮಾಡಲಾಗಿದೆ. ಈ ಕೈಪಿಡಿಯ ಅನುವಾದದಲ್ಲಿ ಸತತ ಬೆಂಬಲ ನೀಡಿದ ಶ್ರೀ ಆರ್ ಎಮ್ ಎನ್ ಸಹಾಯ್ (ಭಾ.ಅ.ಸೇ) ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ ಹಾಗೂ ಡಾ. ವೀರೇಂದ್ರ ಸಿಂಗ್ (ಭಾ.ಅ.ಸೇ) ಸದಸ್ಯ ಕಾರ್ಯದರ್ಶಿ, ಕರ್ನಾಟಕ ಜೀವವೈವಿಧ್ಯ ಮಂಡಳಿ ಇವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಕನ್ನಡದ ಅನುವಾದದ ರಚನೆಯಲ್ಲಿ ಸಹಕರಿಸಿದ ಶ್ರೀ ವಿನಾಯಕ್ ಮತ್ತು ಡಾ. ಕೇಶವಮೂರ್ತಿ ಎಸ್ ವಿ, ಇವರಿಗೆ ಧನ್ಯವಾದಗಳು.

–ಡಾ. ವಿದ್ಯಾ ಪ್ರದೀಪ್ ಕುಮಾರ್, ದರ್ಶನ್ ಬಿ.ಸಿ ಮತ್ತು ನಿಶ್ಚಿತ ಎನ್, ಕರ್ನಾಟಕ ಜೀವವೈವಿಧ್ಯ ಮಂಡಳಿ, ಬೆಂಗಳೂರು.

**ವಿಶೇಷ ಟಿಪ್ಪಣಿ:**

ಈ ಪುಸ್ತಕದ ರಚನೆಯಲ್ಲಿ ನಾವುಗಳು ಅತ್ಯಂತ ಸೂಕ್ಷ್ಮವಾದ ಹಾಗೂ ಮಹತ್ವಪೂರ್ಣವಾದ ಅಂಶಗಳನ್ನು ಸರಳವಾದ ರೀತಿಯಲ್ಲಿ ಪ್ರಸ್ತುತಪಡಿಸಿದ್ದೇವೆ. ಯಾವುದೇ ರೀತಿಯ ತಪ್ಪುಗಳಿಗೆ ಅವಕಾಶ ನೀಡಲಾಗಿಲ್ಲ. ತಪ್ಪುಗಳು ಕಂಡು ಬಂದಲ್ಲಿ ಅವುಗಳು ಉದ್ದೇಶಪೂರ್ವಕವಲ್ಲ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಅಥವಾ ಯೋಜನೆಯು ಹೊಣೆಗಾರರಾಗಿರುವುದಿಲ್ಲ. ಆದಾಗ್ಯೂ, ಯಾವುದಾದರೂ ವ್ಯತ್ಯಾಸಗಳಿದ್ದಲ್ಲಿ ಆಂಗ್ಲ ಭಾಷೆಯ ಆವೃತ್ತಿಯನ್ನು ಅವಲೋಕಿಸಬಹುದು.

**ಮುದ್ರಣ ಹಾಗೂ ಹಂಚಿಕೆ ಹಕ್ಕುಗಳು:**
ಕರ್ನಾಟಕ ಜೀವವೈವಿಧ್ಯ ಮಂಡಳಿ.
ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು. 560003

NOT FOR SALE

## ವ್ಯಾಖ್ಯಾನ ಮತ್ತು ವಿವರಣೆ

# ಜೈವಿಕ ಸಂಪನ್ಮೂಲಗಳ
# “ಬಳಕೆ ಮತ್ತು ಲಾಭಹಂಚಿಕೆ” ಪರಿಭಾಷೆ


## ಕರ್ನಾಟಕ ಜೀವವೈವಿಧ್ಯ ಮಂಡಳಿ

ನೆಲಮಹಡಿ, “ವನವಿಕಾಸ”, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003

ದೂರವಾಣಿ: 080-23448783 / 2344 8765, ಫ್ಯಾಕ್ಸ್: 080-2344 0535

ಇ–ಮೇಲ್: kbb-ka@nic.in  ವೆಬ್‌ಸೈಟ್ : www.kbb.kar.nic.in

# Foreword

The Biological Diversity Act 2002 was enacted by the Government of India to fulfil its obligations under the Convention of Biological Diversity (CBD) of which India is a party to conserve, Sustainably use and share the benefits of such use equitably between the users and providers of such resources. The Act and Rules, provides a legal framework in India on how the country's biological resources can be accessed, used and benefits shared.

In a mega biodiversity country like India with a diverse set of stakeholders using the country's biological resources, the issue of ABS Access and Benefit Sharing (ABS) is not only important but also relevant to promote conservation and development action.

The National Biodiversity Authority (NBA) has put in place a wide range of actions at national, state and local levels to make stakeholders understand and comply with national ABS provisions, through the UNEP-GEF-MoEF ABS Project on "Strengthening the Implementation of the Biological Diversity Act and Rules with the focus on Access and Benefit Sharing Mechanism", NBA is working on enhancing the capacity and awareness on ABS issues across ten states in the country. This publication was compiled to provide a quick references to ABS terms and explain the same in an easy to understand language for non – experts. I hope this publication will help better understanding of ABS issues not only in India but also globally.

**Dr. Balakrishna Pisupati**
**Former President**
**National Biodiversity Authority, Channai**

# ಮುನ್ನುಡಿ

ಭಾರತ ಸರ್ಕಾರವು ಜೈವಿಕ ವೈವಿಧ್ಯ ಸಮಾವೇಶದ ಹೊಣೆಗಾರಿಕೆಗಳಾದ ಜೈವಿಕ ವೈವಿಧ್ಯ ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ಬಳಕೆದಾರರ ಹಾಗೂ ಪೂರೈಕೆದಾರರ ನಡುವೆ ನ್ಯಾಯಸಮ್ಮತವಾಗಿ ಲಾಭಹಂಚಿಕೆಗಳನ್ನು ಪೂರೈಸಲು ಜೈವಿಕ ವೈವಿಧ್ಯ ಅಧಿನಿಯಮ 2002ನ್ನು ಜಾರಿಗೆ ತಂದಿತು. ಅಧಿನಿಯಮ ಮತ್ತು ನಿಯಮಗಳು ರಾಷ್ಟ್ರದ ಜೈವಿಕ ವೈವಿಧ್ಯ ಸಂಪನ್ಮೂಲಗಳನ್ನು ಹೇಗೆ ಹೊಂದಬೇಕು, ಉಪಯೋಗಿಸಬೇಕು ಮತ್ತು ಲಾಭಗಳನ್ನು ಹಂಚಿಕೊಳ್ಳಬೇಕು ಎಂಬ ಬಗ್ಗೆ ಕಾನೂನು ಚೌಕಟ್ಟನ್ನು ಒದಗಿಸುತ್ತವೆ.

ಬೃಹತ್ ಜೀವವೈವಿಧ್ಯವುಳ್ಳ ದೇಶವಾದ ಭಾರತವು ಸಂಪನ್ಮೂಲಗಳನ್ನು ಬಳಸುವಾಗ ಅವುಗಳ ಸಂರಕ್ಷಣೆ, ಅಭಿವೃದ್ಧಿ ಮತ್ತು ಬಳಕೆಯು ಲಾಭ ಹಂಚಿಕೆಯಷ್ಟೆ (Access and Benefit Sharing- ABS) ಮಹತ್ವದ್ದಾಗಿರುತ್ತದೆ.

ರಾಷ್ಟ್ರೀಯ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭಹಂಚಿಕೆ ಅವಕಾಶಗಳನ್ನು ಪಾಲುದಾರರು ತಿಳಿಯುವಂತೆ ಮತ್ತು ಅನುಸರಿಸುವಂತೆ ಮಾಡಲು ರಾಷ್ಟ್ರೀಯ ಜೀವವ್ಯವಿಧ್ಯ ಪ್ರಾಧಿಕಾರವು (National Biodiversity Authority- NBA) ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ವ್ಯಾಪಕ ಕ್ರಮಗಳನ್ನು ಜಾರಿಗೆ ತಂದಿದೆ. ಸಂಯುಕ್ತ ರಾಷ್ಟ್ರ ಪರಿಸರ ಕಾರ್ಯಕ್ರಮ, ಜಾಗತಿಕ ಪರಿಸರ ಸೌಲಭ್ಯ, ಅರಣ್ಯ ಪರಿಸರ, ಜೀವಶಾಸ್ತ್ರ ಮತ್ತು ಹವಾಮಾನ ಸಚಿವಾಲಯಗಳ (United Nations Environment Programme- Global Environment Facility- Ministry of Environment, Forests and Climate Change- UNEP-GEF-MoEF) ಜಂಟೀ ಸಹಯೋಗದಲ್ಲಿ ಕೈಗೊಂಡಿರುವ "ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಸಂಬಂಧಿತ ಲಾಭಹಂಚಿಕೆಯ ಅವಕಾಶಗಳಿಗೆ ಒತ್ತು ನೀಡುವುದರೊಂದಿಗೆ ಜೈವಿಕ ವೈವಿಧ್ಯತೆ ಅಧಿನಿಯಮ ಮತ್ತು ನಿಯಮಗಳ ಬಲವರ್ಧನೆ" ಎಂಬ ಯೋಜನೆಯ ಮೂಲಕ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ರಾಷ್ಟ್ರದ ಹತ್ತು ರಾಜ್ಯಗಳಲ್ಲಿ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭಹಂಚಿಕೆ ವಿಷಯಗಳಲ್ಲಿ ಸಾಮರ್ಥ್ಯ ಮತ್ತು ಅರಿವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ. ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭಹಂಚಿಕೆ ವಿಷಯಗಳನ್ನು ತ್ವರಿತವಾಗಿ ಉಲ್ಲೇಖಿಸುವಂತೆ ಮತ್ತು ತಜ್ಞರಲ್ಲದವರು ಸುಲಭವಾಗಿ ಅರ್ಥ ಮಾಡಿಕೊಳ್ಳುವಂತೆ ಈ ಪ್ರಕಟಣೆಯನ್ನು ರಚಿಸಲಾಗಿದೆ. ಭಾರತದಲ್ಲಿ ಅಲ್ಲದೆ ಜಾಗತಿಕವಾಗಿ ಬಳಕೆ ಮತ್ತು ಲಾಭಹಂಚಿಕೆ ವಿಷಯಗಳನ್ನು ತಿಳಿಯಲು ಹೆಚ್ಚಿನ ಸಹಾಯವನ್ನು ಈ ಪ್ರಕಟಣೆ ಮಾಡುತ್ತದೆಯೆಂದು ನಾನು ಆಶಿಸುತ್ತೇನೆ.

**ಡಾ. ಬಾಲಕೃಷ್ಣ ಪಿಸುಪತಿ**
**ಮಾಜಿ ಅಧ್ಯಕ್ಷರು**
**ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ**

# Introduction

India is one of the 17 mega biodiversity countries of the world where a majority of its population still directly depends on biological resources for their livelihood. With only 2.5 percent of the total land area, India accounts for 8 per cent of the recorded species of the world which includes countless millions of races subspecies and local variants of species.

India has been playing major role in the implementation of global, regional and national policies and programme related to environment, biodiversity trade, and intellectual property rights. Biological diversity and associated traditional knowledge are two important areas of focus for India with links to sustainable development.

Government of India enacted the Biological Diversity Act, 2002 and notified the Rules in 2004. The Act focuses on conservation of biological diversity, sustainable use and equitable sharing of benefits.

This Act provides for regulated access to biological and genetic resources by bonafide end-users for different purposes, including scientific research, commercial uses, bio-survey and bio utilization, conservation and other sustainable uses. The implementation of the Act is overseen by three functional bodies' viz., the National Biodiversity Authority (NBA), the State Biodiversity Boards (SBBs) and the Biodiversity Management Committees(BMCs).

India experience in implementing the ABS provisions under the Act is based on 'learning by doing' approach. So far about one hundred and ten legal agreements on ABS were signed.

This publication is an attempt to create more awareness on the issue of ABS for non-experts to understand ABS terms and definitions. We anticipate that this compilation of ABS terms with explanations and definitions would increase the capacities to better participate in operationalizing theABS provisions under the Act in India and abroad.

# ಪರಿಚಯ

ಭಾರತವು ವಿಶ್ವದ 17 ಬೃಹತ್ ಜೀವವೈವಿಧ್ಯಮಯ ದೇಶಗಳಲ್ಲಿ ಒಂದಾಗಿದ್ದು, ಅದರ ಬಹುಪಾಲು ಜನ ಈಗಲೂ ತಮ್ಮ ಜೀವನಾಧಾರಕ್ಕಾಗಿ ಜೈವಿಕ ಸಂಪನ್ಮೂಲಗಳ ಮೇಲೆ ಅವಲಂಬಿತರಾಗಿದ್ದಾರೆ. ಒಟ್ಟು ಭೂಪ್ರದೇಶದ ಪ್ರತಿಶತ 2.5 ರಷ್ಟಿದ್ದರೂ ವಿಶ್ವದಲ್ಲಿ ದಾಖಲಿಸಿದ ಜೀವಿಪ್ರಭೇದಗಳ ಪ್ರತಿಶತ ಶೇಕಡಾ 8 ರಷ್ಟನ್ನು ಭಾರತವು ಹೊಂದಿದೆ. ಇವು ಅನೇಕ ದಶಲಕ್ಷ ಪ್ರಭೇದ, ಉಪಪ್ರಭೇದಗಳನ್ನು ಮತ್ತು ಪ್ರಭೇದಗಳ ಸ್ಥಳೀಯ ರೂಪಾಂತರಗಳನ್ನು ಹೊಂದಿವೆ.

ಭಾರತವು ಜಾಗತಿಕ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ, ಪರಿಸರ, ಜೈವಿಕ ವೈವಿಧ್ಯತೆ, ವ್ಯಾಪಾರ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ನೀತಿ ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಹಾಗೂ ಜೈವಿಕ ವೈವಿಧ್ಯತೆ ಮತ್ತು ಅದಕ್ಕೆ ಸಂಬಂಧಿತ ಸಾಂಪ್ರದಾಯಿಕ ಜ್ಞಾನ, ದೇಶದ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಭಾರತ ಸರ್ಕಾರವು 2002 ರಲ್ಲಿ ಜೈವಿಕ ವೈವಿಧ್ಯ ಅಧಿನಿಯಮವನ್ನು ಜಾರಿಗೆ ತಂದಿದೆ ಮತ್ತು 2004 ರಲ್ಲಿ ಜೈವಿಕ ವೈವಿಧ್ಯ ನಿಯಮಗಳನ್ನು ಅಧಿಸೂಚಿಸಿದೆ. ಈ ಕಾಯ್ದೆಯ ಮುಖ್ಯ ಉದ್ದೇಶಗಳೆಂದರೆ, ಜೈವಿಕ ವೈವಿಧ್ಯತೆಯ ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ನ್ಯಾಯಸಮ್ಮತ ಲಾಭಗಳ ಹಂಚಿಕೆ.

ಈ ಅಧಿನಿಯಮವು ವೈಜ್ಞಾನಿಕ ಸಂಶೋಧನೆ, ವಾಣಿಜ್ಯ ಬಳಕೆ, ಜೈವಿಕ ಸಮೀಕ್ಷೆ, ಜೈವಿಕ ಬಳಕೆ, ಸಂರಕ್ಷಣೆ ಮತ್ತು ಇತರ ಸುಸ್ಥಿರ ಬಳಕೆಯ ಉದ್ದೇಶಗಳಿಗಾಗಿ, ಅಧಿಕೃತ ಬಳಕೆದಾರರಿಗೆ ಜೈವಿಕ ಮತ್ತು ವಂಶವಾಹಿ ಸಂಪನ್ಮೂಲಗಳ ಕ್ರಮಬದ್ಧ ಉಪಯೋಗಕ್ಕೆ ಅವಕಾಶವನ್ನು ಒದಗಿಸುತ್ತದೆ. ಅಧಿನಿಯಮದ ಅನುಷ್ಠಾನದ ಮೇಲ್ವಿಚಾರಣೆಗೆ ಮೂರು ಕಾನೂನಾತ್ಮಕ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಅವುಗಳೆಂದರೆ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ (National Biodiversity Authority), ರಾಜ್ಯ ಜೀವವೈವಿಧ್ಯ ಮಂಡಳಿಗಳು (State Biodiversity Boards) ಮತ್ತು ಜೀವವೈವಿಧ್ಯ ನಿರ್ವಹಣಾ ಸಮಿತಿಗಳು (Biodiversity Management Committees).

ಜೈವಿಕ ಅಧಿನಿಯಮದಡಿ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭಹಂಚಿಕೆ ಪ್ರಕ್ರಿಯೆಯನ್ನು ಅನುಷ್ಠಾನಗೊಳಿಸುವುದರಲ್ಲಿ, ಭಾರತವು "ಮಾಡುತ್ತಾ ಕಲಿಯುವುದು" ವಿಧಾನವನ್ನು ಅನುಸರಿಸಿದೆ. ಈಗಾಗಲೇ ನೂರಹತ್ತು ಕಾನೂನಾತ್ಮಕ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭಹಂಚಿಕೆ ಒಪ್ಪಂದಗಳಿಗೆ ಸಹಿ ಮಾಡಲಾಗಿದೆ.

ಈ ಪ್ರಕಟಣೆಯುಲ್ಲಿ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭಹಂಚಿಕೆ ಪ್ರಕ್ರಿಯೆಯ ವ್ಯಾಖ್ಯಾನ ಮತ್ತು ವಿವರಣೆಯನ್ನು ನೀಡಲಾಗಿದೆ. ವಿವರಣೆಗಳು ಮತ್ತು ವ್ಯಾಖ್ಯಾನಗಳೊಂದಿಗೆ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭಹಂಚಿಕೆ ನಿಬಂಧನೆಗಳ ಈ ಹೊತ್ತಿಗೆಯು ದೇಶದೊಳಗಿನ ಮತ್ತು ಹೊರದೇಶಗಳಲ್ಲಿಯ ಸಂಪನ್ಮೂಲಗಳ ಬಳಕೆ ಮತ್ತು ಲಾಭಹಂಚಿಕೆ ಅವಕಾಶಗಳಲ್ಲಿ ಭಾರತವು ಹೆಚ್ಚೆಚ್ಚು ಭಾಗವಹಿಸುವಂತಾಗುವ ಸಾಮರ್ಥ್ಯವನ್ನು ವೃದ್ಧಿಸುತ್ತದೆಯೆಂದು ನಾವು ಭಾವಿಸುತ್ತೇವೆ. ಈ ಸಂಕಲನವು ಬಳಕೆ ಮತ್ತು ಲಾಭಹಂಚಿಕೆ ಪ್ರಕ್ರಿಯೆಯನ್ನು, ಭಾರತ ಮತ್ತು ವಿದೇಶದಲ್ಲಿ ಕ್ರಿಯಾಶೀಲಗೊಳಿಸುವುದರಲ್ಲಿ ಹಾಗೂ ಪರಿಣಾಮಕಾರಿಯಾಗಿ ಭಾಗವಹಿಸಲು ಸಹಾಯವಾಗುತ್ತದೆ ಎಂದು ನಿರೀಕ್ಷಿಸುತ್ತೇವೆ.



## Defining and explaining the ABS terminology

## ಬಳಕೆ ಮತ್ತು ಲಾಭಹಂಚಿಕೆ ಪರಿಭಾಷೆಯ ವ್ಯಾಖ್ಯಾನೀಕರಣ ಮತ್ತು ವಿವರಣೆ

**Access-** To obtain biological resources or knowledge associated thereto within national jurisdiction for the purpose of research, or for commercial utilization, or for bio-survey and bio-utilization[1].

**ಬಳಕೆ:** ಸ್ಥಳೀಯ ಸಂಸ್ಥೆಯ ಅಧಿಕಾರ ವ್ಯಾಪ್ತಿಯೊಳಗೆ ಬರುವ ಜೈವಿಕ ಸಂಪನ್ಮೂಲಗಳನ್ನು ಮತ್ತು ಸಂಬಂಧಿತ ಜ್ಞಾನವನ್ನು ಸಂಶೋಧನೆ, ವಾಣಿಜ್ಯ ಬಳಕೆ, ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆಯ ಉದ್ದೇಶಗಳಿಗೆ ಪಡೆಯುವುದು[1].

**Agreement-** An agreement is a mutual understanding between two or more legally competent persons with respect to their rights and duties regarding their past or future actions[2]. Every promise and every set of promises forming consideration for each other are agreement(s)[3].

**ಒಪ್ಪಂದ:** ಭೂತಕಾಲದ ಅಥವಾ ಭವಿಷ್ಯತ್ತಿನ ಕ್ರಿಯೆಗಳಿಗೆ ಸಂಬಂಧಿಸಿದ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಇಬ್ಬರು ಅಥವಾ ಹೆಚ್ಚು ಕಾನೂನುಬದ್ಧ ಸಕ್ಷಮ ವ್ಯಕ್ತಿಗಳ ನಡುವಿನ ಒಪ್ಪಂದ[2]. ಪರಸ್ಪರ ಪರಿಗಣಿಸಿ ರೂಪಿಸಿದ ಪ್ರತಿಯೊಂದು ಭರವಸೆ ಮತ್ತು ಪ್ರತಿಯೊಂದು ಭರವಸೆಗಳ ಸಮೂಹಗಳು ಒಪ್ಪಂದಗಳಾಗಿವೆ[3].

**Agriculture-** The art and science of growing plants and raising of animals for food, other human needs, or economic gain[4].

**ಕೃಷಿ:** ಮಾನವನ ಆಹಾರಕ್ಕಾಗಿ ಹಾಗೂ ಇತರ ಅವಶ್ಯಕತೆಗಳಿಗೆ, ಅಥವಾ ಆರ್ಥಿಕ ಲಾಭಕ್ಕಾಗಿ, ಸಸ್ಯಗಳನ್ನು ಬೆಳೆಸುವುದು ಮತ್ತು ಪಶುಸಂಗೋಪನೆ ಮಾಡುವ ಕಲೆ ಮತ್ತು ವಿಜ್ಞಾನ[4].

**Agro-biodiversity-** Biological diversity of agriculture related species and their wild relatives[5].

**ಕೃಷಿ–ಜೀವವೈವಿಧ್ಯತೆ:** ಕೃಷಿ ಸಂಬಂಧಿತ ಪ್ರಭೇಧಗಳು ಮತ್ತು ಅವುಗಳ ಸಾಮ್ಯತೆ ಇರುವ ಸಾಗುವಳಿ ಮಾಡಿದ ಪ್ರಭೇಧಗಳಲ್ಲಿನ ಜೈವಿಕ ವೈವಿಧ್ಯತೆ[5].

**Benefit Claimers-** Conservers of biological resources, their by-products, creators and holders of knowledge and information relating to the use of such biological resources, innovations and practices associated with such use and application[6].

**ಲಾಭದ ಕ್ಲೇಮುದಾರರು:** ಜೈವಿಕ ಸಂಪನ್ಮೂಲಗಳು, ಅವುಗಳ ಉಪ ಉತ್ಪನ್ನಗಳ ಸಂರಕ್ಷಕರು, ಮತ್ತು ಅಂಥ ಜೈವಿಕ ಸಂಪನ್ಮೂಲಗಳ ಬಳಕೆಗೆ ಸಂಬಂಧಪಟ್ಟ ಜ್ಞಾನ ಮತ್ತು ಮಾಹಿತಿಯನ್ನು ಹಾಗೂ ಅಂತಹ ಬಳಕೆ ಮತ್ತು ಅನ್ವಯಕ್ಕೆ ಸಂಬಂಧಿಸಿದ ಸಂಶೋಧನೆಗಳು ಮತ್ತು ಪದ್ಧತಿಗಳನ್ನು ಸೃಜಿಸುವವರು ಮತ್ತು ಹೊಂದಿರುವವರು[6].

**Benefit Sharing-** Equitable sharing of benefits (both monetary and non monetary), arising out of the use of accessed biological resources, their by-products, innovations and practices associated with their use and applications and knowledge relating there to in accordance with mutually agreed terms and conditions between the person applying for such approval, local bodies concerned and the benefit claimers[7]. As per the biological diversity (BD) Act benefits can be shared by means of[7]:

a. Grant of Joint ownership of intellectual property rights

b. Transfer of technology;

c. Location of production, research and development unit in such areas which will facilitate better living standards to benefit claimers:

d. Associations of Indian scientists, benefit claimers and the local people with research and development in biological resources and bio-survey and bio-utilization;

e. Setting up of venture capital fund for aiding the cause of benefit claimers;

f. Monetary and non-monetary benefits.

**ಲಾಭದ ಹಂಚಿಕೆ:** ಸ್ಥಳೀಯ ಸಂಸ್ಥೆಗಳು ಮತ್ತು ಲಾಭದ ವಾರಸುದಾರರ ನಡುವಿನ ಪರಸ್ಪರ ಒಪ್ಪಿಗೆಯ ನಿಯಮಗಳು ಮತ್ತು ಷರತ್ತುಗಳಿಗನುಗುಣವಾಗಿ ಜೈವಿಕ ಸಂಪನ್ಮೂಲಗಳ ಬಳಕೆಯ ಬಗ್ಗೆ ಜ್ಞಾನವುಳ್ಳವರು (ಪಾರಂಪರಿಕವಾಗಿ), ಸಂಶೋಧಕರು, ಸಂಪನ್ಮೂಲಗಳ ಬಳಕೆಗೆ ಮತ್ತು ಅನ್ವಯಗಳೊಂದಿಗೆ ಸಂಬಂಧಿಸಿದ ಆವಿಷ್ಕಾರಗಳಿಂದ ಮತ್ತು ಪದ್ಧತಿಗಳಿಂದ ಲಭ್ಯವಾಗುವ ನ್ಯಾಯಸಮ್ಮತ ಲಾಭ (ಹಣಕಾಸು ಮತ್ತು ಹಣಕಾಸೇತರ ಎರಡೂ) ಹಂಚಿಕೆಗಳು. ಜೈವಿಕ ವೈವಿಧ್ಯ ಅಧಿನಿಯಮದ ಪ್ರಕಾರ, ಲಾಭಗಳ ಹಂಚಿಕೆಯನ್ನು ಈ ಕೆಳಗಿನಂತೆ ಮಾಡಬಹುದು[7]:

ಅ. ಬೌದ್ಧಿಕ ಆಸ್ತಿ ಹಕ್ಕುಗಳ ಜಂಟೀ ಮಾಲೀಕತ್ವದ ಅವಕಾಶ ನೀಡುವುದು;

ಆ. ತಂತ್ರಜ್ಞಾನದ ವರ್ಗಾವಣೆ;

ಇ. ಲಾಭದ ಹಕ್ಕುದಾರರ ಜೀವನ ಮಟ್ಟವನ್ನು ಸುಧಾರಿಸುವಂತಹ ಪ್ರದೇಶಗಳಲ್ಲಿ ಉತ್ಪಾದನೆ, ಸಂಶೋಧನೆ. ಮತ್ತು ಅಭಿವೃದ್ಧಿ ಘಟಕ ಸ್ಥಾಪನೆ;

ಈ. ಜೈವಿಕ ಬಳಕೆ, ಜೈವಿಕ ಸಮೀಕ್ಷೆ ಮತ್ತು ಜೈವಿಕ ಸಂಪನ್ಮೂಲಗಳಲ್ಲಿನ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಭಾರತೀಯ ವಿಜ್ಞಾನಿಗಳು, ಲಾಭದ ಹಕ್ಕುದಾರರು ಮತ್ತು ಸ್ಥಳೀಯ ಜನರೊಂದಿಗೆ ಸಹಯೋಗ;

ಉ. ಲಾಭದ ಹಕ್ಕುದಾರರಿಗೆ ನೆರವು ನೀಡುವುದಕ್ಕಾಗಿ ಸಹಾಯ ಬಂಡವಾಳ ನಿಧಿಯ ಸ್ಥಾಪನೆ;

ಊ. ಹಣಕಾಸು ಮತ್ತು ಹಣಕಾಸೇತರ ಲಾಭಗಳು.

**Biodiversity Heritage sites (BHS)-** Well defined areas that are unique, ecologically fragile ecosystems-terrestrial, coastal and inland waters and marines having rich biodiversity viz., richness of wild as well as domesticated species or intra-specific categories, high endemism, presence of rare and threatened species, keystone species, species of evolutionary significance, wild ancestors of domestic/cultivated species or their varieties, past pre-eminence of biological components represented by fossil beds and having significant cultural, ethical or aesthetic values and are important for the maintenance of cultural diversity, with or without a long history of human association with them . The BHS is established under section 37 of the BD Act of India.

**ಜೀವವೈವಿಧ್ಯತೆಗೆ ಆಶ್ರಯವಾಗಿರುವ ಪಾರಂಪರಿಕ ತಾಣಗಳು:** ಅನನ್ಯ ಹಾಗೂ ಸೂಕ್ಷ್ಮ ಪರಿಸರ ಹೊಂದಿರುವ, ಸಮೃದ್ಧ ಜೀವವೈವಿಧ್ಯತೆಯ ಕರಾವಳಿ, ಒಳನಾಡು, ಸಾಮುದ್ರಿಕ ಮತ್ತು ಜಲಾಶ್ರಿತ, ಹೇರಳವಾದ ಜೀವವೈವಿಧ್ಯತೆಯ ವನ್ಯ-ಪಳಗಿಸಿದ-ಕೃಷಿ ಪ್ರಭೇಧಗಳುಳ್ಳ ಪ್ರದೇಶಗಳು.

ಉದಾ:

* ಅಪರೂಪದ ಹಾಗೂ ಅಪಾಯದಂಚಿನಲ್ಲಿರುವ ಜೀವಸಂಕುಲಗಳುಳ್ಳ ಪ್ರದೇಶಗಳು.
* ಅತೀ ಹೆಚ್ಚು ಪ್ರಭಾವವನ್ನು ಹೊಂದಿರುವ ಪ್ರಭೇದಗಳು ಅಥವಾ ಅವುಗಳ ಬಂಧುಗಳಿರುವ ಪ್ರದೇಶಗಳು.
* ದೀರ್ಘಕಾಲೀನ ಮಾನವ ಸಂಬಂಧವಿರುವ/ಇಲ್ಲದಿರುವ, ಹಿಂದೊಮ್ಮೆ ಸಾಂಸ್ಕೃತಿಕ-ನೈತಿಕ-ಕಲಾತ್ಮಕ ಮೌಲ್ಯ ಹೊಂದಿದ್ದು ಪ್ರಸ್ತುತ ಅವುಗಳ ಪಳಯುಳಿಕೆಯನ್ನು ಹೊಂದಿರುವ ಪ್ರಭೇಧಗಳಿರುವ ಪ್ರದೇಶಗಳು.
* ಸಾಂಸ್ಕೃತಿಕ ವೈವಿಧ್ಯತೆಯಲ್ಲಿ ಪ್ರಮುಖ ಪಾತ್ರ ವಹಿಸಿರುವಪ್ರಭೇಧಗಳಿರುವ ಪ್ರದೇಶಗಳು.

ಜೈವಿಕ ವೈವಿಧ್ಯತೆಯ ಪಾರಂಪರಿಕ ತಾಣಗಳನ್ನು ಭಾರತದ ಜೈವಿಕ ವೈವಿಧ್ಯ ಅಧಿನಿಯಮ ಪ್ರಕರಣ 37 ರ ಪ್ರಕಾರ ಸ್ಥಾಪಿಸಲಾಗುತ್ತದೆ.

**Biodiversity Offsetting-** Conservation action intended to compensate for the residual, unavoidable harm to biodiversity caused by development projects, so as to ensure 'no net loss' of biodiversity. Before developer contemplates offsets, they should have first sought to avoid and minimize harm to biodiversity[9].

**ಜೀವವೈವಿಧ್ಯ ಮರುಸ್ಥಾಪನೆಗೊಳಿಸುವಿಕೆ:** ಸಂರಕ್ಷಣಾ ಕ್ರಿಯೆಯು, ಜೀವವೈವಿಧ್ಯತೆಗೆ ಅಭಿವೃದ್ಧಿ ಯೋಜನೆಗಳಿಂದಾಗುವ ಅನಿವಾರ್ಯ, ಅನುದ್ದೇಶಿತ, ಹಾಗೂ ಆನುಷಂಗಿಕ ಹಾನಿಗಳಿಗೆ ಪರಿಹಾರವನ್ನು ನೀಡುವ ಉದ್ದೇಶವನ್ನು ಹೊಂದಿದೆ, ಇದು ಜೀವವೈವಿಧ್ಯತೆಗೆ ಯಾವುದೇ ರೀತಿಯ ಹಾನಿಯಾಗದಂತೆ ನೋಡಿಕೊಳ್ಳಲು ಸಾಧ್ಯವಾಗುತ್ತದೆ. ಯಾವುದೇ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಳ್ಳುವಾಗ ಜೀವವೈವಿಧ್ಯತೆಗೆ ಹಾನಿಯಾಗದಂತೆ ಅಥವಾ ಹಾನಿಯು ಕನಿಷ್ಟತೆ ಆಗಿರುವಂತೆ ನೋಡಿಕೊಳ್ಳಬೇಕು[9].

**Biodiversity Management Committee (BMC) –** As per the BD Act of India, BMCs are committees constituted by local bodies in their territorial jurisdiction, BMCs are constituted for the purpose of promoting conservation, sustainable use and documentation of biological diversity including preservation of habitats,

conservation of land races, folk varieties and cultivars, domesticated stocks and breeds of animals and micro organisms and chronicling of knowledge related to biological diversity[10]. BMCs are statutory bodies at local level.

**ಜೀವವೈವಿಧ್ಯ ನಿರ್ವಹಣಾ ಸಮಿತಿ:** ಜೈವಿಕ ವೈವಿಧ್ಯ ಅಧಿನಿಯಮದ ಪ್ರಕಾರ, ಪ್ರತಿಯೊಂದು ಸ್ಥಳೀಯ ನಿಕಾಯವೂ ತನ್ನ ಪ್ರದೇಶದಲ್ಲಿ, ಆವಾಸಗಳ ಸಂರಕ್ಷಣೆ, ಭೂ ಸಂತತಿಗಳ ಸಂರಕ್ಷಣೆ, ನಾಟಿ ತಳಿ ಪ್ರಭೇದಗಳು, ಕೃಷಿ ತಳಿಗಳು, ಪಳಗಿಸಿದ ಪ್ರಾಣಿಗಳು ಅವುಗಳ ತಳಿಗಳು ಹಾಗೂ ಸೂಕ್ಷ್ಮಜೀವಿಗಳು ಮತ್ತು ಜೈವಿಕ ವೈವಿಧ್ಯಕ್ಕೆ ಸಂಬಂಧಿಸಿದ ಅವುಗಳ ಕಾಲಾನುಕ್ರಮದ ಪರಿಚಯವೂ ಸೇರಿದಂತೆ ಜೈವಿಕ ವೈವಿಧ್ಯದ ಸಂರಕ್ಷಣೆ, ಸುಸ್ಥಿರ ಬಳಕೆ ಹಾಗೂ ದಾಖಲಾತಿಯ ಉದ್ದೇಶಕ್ಕಾಗಿ ತನ್ನ ಪ್ರದೇಶದಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸತಕ್ಕದ್ದು[10].

**Biological Diversity-** Variability among living organisms from all sources and the ecological complexes of which they are part and includes diversity within species or between species and of eco-systems[11].

**ಜೈವಿಕ ವೈವಿಧ್ಯತೆ:** ಎಲ್ಲಾ ಮೂಲಗಳ ಮತ್ತು ಅವುಗಳ ಭಾಗವಾಗಿರುವ ಜೀವಿ ಪರಿಸ್ಥಿತಿ ಸಂಕೀರ್ಣಗಳಿಂದ ಉಂಟಾಗುವ ಸಜೀವಿಗಳೊಳಗಿನ ವೈವಿಧ್ಯ ಮತ್ತು ಅದು ಪ್ರಭೇದಗಳೊಳಗಿನ ಅಥವಾ ಪ್ರಭೇಧಗಳ ನಡುವಿನ ಮತ್ತು ಪರಿಸರ ವ್ಯವಸ್ಥೆಗಳಲ್ಲಿನ ವೈವಿಧ್ಯವನ್ನು ಒಳಗೊಳ್ಳುತ್ತದೆ[11].

**Biological Resources-** Plants, animals and microorganism or parts thereof, their genetic material and by-products (excluding value added products) with actual or potential use or value (but does not include human genetic material)[12].

**ಜೈವಿಕ ಸಂಪನ್ಮೂಲಗಳು:** ಸಸ್ಯಗಳು, ಪ್ರಾಣಿಗಳು, ಮತ್ತು ಸೂಕ್ಷ್ಮಾಣು ಜೀವಿಗಳು ಅಥವಾ ಅದರ ಭಾಗಗಳು, ವಾಸ್ತವಿಕ ಅಥವಾ ಸಮರ್ಥ ಉಪಯೋಗ ಮೌಲ್ಯವುಳ್ಳ ಅವುಗಳ ವಂಶವಾಹಿ ವಸ್ತುಗಳು ಮತ್ತು ಉಪಉತ್ಪನ್ನಗಳು (ಮೌಲ್ಯವರ್ಧಿತ ಉತ್ಪನ್ನಗಳನ್ನು ಹೊರತುಪಡಿಸಿ), ಆದರೆ ಮಾನವ ವಂಶವಾಹಿ ವಸ್ತುಗಳನ್ನು ಒಳಗೊಳ್ಳುವುದಿಲ್ಲ[12].

**Bio-piracy-** The appropriation of biological resources without the prior informed consent of owners or local people or government[1].

**ಜೈವಿಕ ಸಂಪನ್ಮೂಲಗಳ ಕಳವು:** ಮಾಲೀಕರಿಗೆ ಅಥವಾ ಸ್ಥಳೀಯ ಜನರಿಗೆ ಅಥವಾ ಸರ್ಕಾರಕ್ಕೆ "ಮುಂಚಿತವಾಗಿ ಸೂಚಿತವಾದ ಸಮ್ಮತಿ" (Prior Informed Consent) ಇಲ್ಲದೇ ಜೈವಿಕ ಸಂಪನ್ಮೂಲಗಳ ಬಳಕೆ[1].

**Bio-prospecting-** The collection, research and use of biological and/or genetic material for purposes of applying the knowledge derived there from for scientific and/or commercial purposes. Bio-prospecting entails the search for economically valuable genetic and biochemical resources from nature[1].

**ಜೈವಿಕ ನಿರೀಕ್ಷಣೆ:** ಜೈವಿಕ ಮತ್ತು /ಅಥವಾ ವಂಶವಾಹಿ ವಸ್ತುಗಳ ಸಂಗ್ರಹಣೆ, ಸಂಶೋಧನೆಗಳನ್ನು ವೈಜ್ಞಾನಿಕ ಮತ್ತು /ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಬಳಕೆ ಮಾಡುವುದು. ಜೈವಿಕ ನಿರೀಕ್ಷಣೆಯು, ಪ್ರಕೃತಿಯಲ್ಲಿ ಆರ್ಥಿಕ ಮೌಲ್ಯವುಳ್ಳ ಅನುವಂಶಿ ಮತ್ತು ಜೀವರಾಸಾಯನಿಕ ಸಂಪನ್ಮೂಲಗಳನ್ನು ಸಂಶೋಧನೆಗೆ ತೊಡಗಿಸಿಕೊಳ್ಳುವುದು[1].

**Biotechnology-** Technological applications that uses biological systems, living organisms or derivative thereof, to make/modify products or processes for specific use[1].

**ಜೈವಿಕ ತಂತ್ರಜ್ಞಾನ:** ಜೀವಿಗಳ, ಅವುಗಳ ಉತ್ಪನ್ನಗಳ, ಜೈವಿಕ ವ್ಯವಸ್ಥೆಗಳ ಮೂಲಕ ಪ್ರಣೀತವಾದ ಅನ್ವಯಿಕ ತಂತ್ರಜ್ಞಾನದಿಂದ ರೂಪುಗೊಂಡ ಉತ್ಪನ್ನಗಳು ಅಥವಾ ಪ್ರಕ್ರಿಯೆಗಳು[1].

**Bio- survey and Bio- utilization-** Survey or collection of species, subspecies, genes, components and extracts of biological resource for any purpose and includes characterization, inventorisation and bioassay[13].

**ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆ:** ಯಾವುದೇ ಉದ್ದೇಶಕ್ಕಾಗಿ ಪ್ರಭೇದಗಳ, ಉಪಪ್ರಭೇದಗಳ, ವಂಶವಾಹಿಗಳ, ಜೈವಿಕ ಸಂಪನ್ಮೂಲಗಳ ಅಂಗ ಭಾಗಗಳು ಮತ್ತು ಸಾರಗಳ ಸಮೀಕ್ಷೆ ಮತ್ತು ಸಂಗ್ರಹ, ಇದು ಗುಣಲಕ್ಷಣ ವಿವರಣೆ, ದಾಖಲೆ ಪಟ್ಟಿ ಸಿದ್ಧತೆ ಮತ್ತು ಜೈವಿಕ ವಿಶ್ಲೇಷಣೆಯನ್ನು ಒಳಗೊಳ್ಳುತ್ತದೆ[13].

**By-products-** It is a secondary product derived during the manufacturing process or chemical reaction. The by-products derived from the biological resources can be useful, marketable or a waste product[14].

**ಉಪ-ಉತ್ಪನ್ನಗಳು:** ಇದು ರಾಸಾಯನಿಕ ಕ್ರಿಯೆ ಅಥವಾ ಉತ್ಪಾದನಾ ಪ್ರಕ್ರಿಯೆ ಸಂದರ್ಭದಲ್ಲಿ ಪಡೆದ ಗೌಣ ಉತ್ಪನ್ನವಾಗಿದೆ. ಜೈವಿಕ ಸಂಪನ್ಮೂಲಗಳಿಂದ ಪಡೆದಂತಹ ಉಪ-ಉತ್ಪನ್ನಗಳು ಉಪಯೋಗಕ್ಕೆ, ಮಾರಾಟಕ್ಕೆ ಉಪಯುಕ್ತವಾಗಬಹುದು ಅಥವಾ ತ್ಯಾಜ್ಯ ವಸ್ತುಗಳಾಗಿರ ಬಹುದು[14].

**Clearing House Mechanism-** An effective information service (established by the convention on biological diversity) to promote and facilitate scientific and technical cooperation, knowledge sharing and information exchange, and to establish a fully operational network of parties and partners[15].

**ಮಾಹಿತಿ "ಕ್ಲಿಯರಿಂಗ್ ಹೌಸ್":** ಜಾಗತಿಕ ಜೀವವೈವಿಧ್ಯ ಸಮಾವೇಶದ ಮುಖಾಂತರ ಸ್ಥಾಪಿತವಾದ ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರ, ಜ್ಞಾನದ ಹಂಚಿಕೆ, ಮಾಹಿತಿ ವಿನಿಮಯ ಮತ್ತು ಪಕ್ಷಗಳಿಗೆ, ಪಾಲುದಾರರಿಗೆ ಸಂಪೂರ್ಣ ಕಾರ್ಯಾಚರಣೆಯ ಜಾಲವನ್ನು ಸ್ಥಾಪಿಸಲು ಒಂದು ಪರಿಣಾಮಕಾರಿ ಮಾಹಿತಿ ಸೇವೆ[15].

**Commercial Utilization-** Means end uses of biological resources for Commercial Utilization such as drugs , industrial enzymes, food flavours, fragrance, cosmetics, emulsifiers, olioresins, colours, extracts and genes used for improving crops and livestock through genetic intervention, but does not include conventional breeding or traditional practices in use in any agriculture, horticulture, poultry, dairy farming, animal husbandry or bee keeping[16].

**ವಾಣಿಜ್ಯ ಬಳಕೆ:** ವಾಣಿಜ್ಯ ಬಳಕೆ ಎಂದರೆ ಔಷಧ, ಕೈಗಾರಿಕಾ ಕಿಣ್ವ, ಆಹಾರ ಸುವಾಸನೆ, ಪರಿಮಳ, ಪ್ರಸಾದನ, ಸೌಂದರ್ಯವರ್ಧಕ, ಎಮಲ್ಷನ್ ಮಾಡುವ ವಸ್ತು, ಒಲಿಯೋ ರೆಸಿನ್ಸ್, ಬಣ್ಣಗಳು, ಬೆಳೆಗಳು ಮತ್ತು ಜಾನುವಾರಗಳನ್ನು ಸುಧಾರಿಸುವುದಕ್ಕಾಗಿ ವಂಶವಾಹಿನಿಗಳಲ್ಲಿ ವ್ಯತ್ಯಾಸವುಂಟುಮಾಡಲು ಬಳಸುವ ವಂಶವಾಹಿಗಳಂತಹ ವಾಣಿಜ್ಯ ಉಪಯೋಗಕ್ಕಾಗಿ ಬಳಸುವ ಜೈವಿಕ ಸಂಪನ್ಮೂಲಗಳ ಬಳಕೆಗಳು, ಆದರೆ ಇದು ಕೃಷಿ, ತೋಟಗಾರಿಕೆ, ಕೋಳಿ ಸಾಕಣೆ, ಹೈನುಗಾರಿಕೆ, ಪಶುಸಂಗೋಪನೆ ಅಥವಾ ಜೇನು ಸಾಕಣೆಯಲ್ಲಿ ಆಚರಣೆಯಲ್ಲಿರುವ ಸಾಂಪ್ರದಾಯಿಕ ತಳಿ ಅಭಿವೃದ್ಧಿ ಅಥವಾ ರೂಢಿಗತ ಪದ್ಧತಿಗಳನ್ನು ಒಳಗೊಳ್ಳುವುದಿಲ್ಲ[16].

**Convention on Biological Biodiversity (CBD) -** An international convention which entered in to force on 29th December 1993 having 193 countries as parties to date. The CBD has 3 main objectives "conservation of biological diversity, sustainable use of the components of biological diversity and fair and equitable sharing of the benefits arising out of the utilization of genetic resources"[15].

**ಜಾಗತಿಕ ಜೀವವೈವಿಧ್ಯ ಒಡಂಬಡಿಕೆ:** ಈ ಒಡಂಬಡಿಕೆಯು 29ನೇ ಡಿಸೆಂಬರ್ 1993ರಂದು ಅಸ್ತಿತ್ವಕ್ಕೆ ಬಂದ ಜೀವವೈವಿಧ್ಯ ಸಂಬಂಧಿತ ಅಂತರಾಷ್ಟ್ರೀಯ ಸಮಾವೇಶವಾಗಿದೆ. ಇದುವರೆಗೆ 193 ರಾಷ್ಟ್ರಗಳು ಇದರ ಭಾಗವಾಗಿವೆ. ಈ ಸಮಾವೇಶವು ಮೂರು ಉದ್ದೇಶಗಳನ್ನು ಹೊಂದಿದೆ; ಜೈವಿಕ ವೈವಿಧ್ಯತೆಯ ಸಂರಕ್ಷಣೆ, ಜೈವಿಕ ವೈವಿಧ್ಯತೆಯ ಅಂಗಗಳ ಸುಸ್ಥಿರ ಉಪಯೋಗ ಮತ್ತು ಅನುವಂಶಿ ಸಂಪನ್ಮೂಲಗಳ ವಿನಿಯೋಗದಿಂದ ಉದ್ಭವಿಸಿದ ಲಾಭಗಳ ನ್ಯಾಯೋಚಿತ ಮತ್ತು ನ್ಯಾಯಸಮ್ಮತ ಹಂಚಿಕೆ[15].

**Country of Origin-** The country from where the genetic resources and/or biological material originated. A country of origin can be a primary or a secondary centre of origin for the material[1].

**ಮೂಲ ದೇಶ:** ಯಾವ ದೇಶದಲ್ಲಿ ಅನುವಂಶೀಯ ಸಂಪನ್ಮೂಲಗಳು ಮತ್ತು/ಅಥವಾ ಜೈವಿಕ ವಸ್ತುಗಳು ಜನ್ಮತಾಳಿವೆಯೋ ಅಂತಹ ದೇಶವು ಆ ವಸ್ತುವಿನ ಪ್ರಾಥಮಿಕ ಅಥವಾ ದ್ವಿತೀಯ ಮೂಲದ ಕೇಂದ್ರವಾಗಿರುತ್ತದೆ[1].

**Country providing Genetic Resources-** The country supplying genetic resources collected from *in-situ* sources, including population of both wild and domesticated species, or taken from *ex-situ* sources, which may or may not have originated in that country[1].

**ಅನುವಂಶಿ ಸಂಪನ್ಮೂಲಗಳನ್ನು ಒದಗಿಸುವ ದೇಶ:** ಯಾವ ದೇಶದಲ್ಲಿ ಸ್ವಮೂಲ ಅಥವಾ ಅನ್ಯ ಮೂಲಗಳಿಂದ ವನ್ಯ ಮತ್ತು ಪಳಗಿದ ಪ್ರಭೇಧಗಳೆರಡರ ಜನಸಂಖ್ಯೆಯು ಲಭ್ಯತೆ ಇರುವಂತಹ ದೇಶ[1].

**Cultivar-** A variety of plant that has originated and persisted under cultivation or was specifically bred for the purpose of cultivation[17].

**ಕೃಷಿತಳಿ:** ಕೃಷಿ ಉದ್ದೇಶಕ್ಕಾಗಿ ಬೇಸಾಯದ ಮೂಲಕ ಬೆಳೆದಿದ್ದು, ಉಳಿದುಕೊಂಡು ಬಂದ ಅಥವಾ ಬೇಸಾಯದ ಉದ್ದೇಶಕ್ಕಾಗಿ ನಿರ್ದಿಷ್ಟವಾಗಿ ಅಭಿವೃದ್ಧಿಪಡಿಸಿದ ತಳಿಯ ಸಸ್ಯ ಪ್ರಭೇದ[17].

**Derivatives-** Naturally occurring biochemical compounds resulting from the genetic expression or metabolism of biological or genetic resources, even if it does not contain functional units of heredity[18].

**ಉತ್ಪನ್ನಗಳು:** ವಂಶವಾಹಿ ಕಾರ್ಯನಿರ್ವಾಹಕ ಘಟಕಗಳನ್ನು ಹೊಂದಿರದಿದ್ದರೂ ಸಹ, ಅನುವಂಶಿಕ ಅಭಿವ್ಯಕ್ತಿ ಅಥವಾ ಜೈವಿಕ ಚಯಾಪಚಯಗಳಿಂದ ಅಥವಾ ಅನುವಂಶಿ ಸಂಪನ್ಮೂಲಗಳ ಪರಿಣಾಮವಾಗಿ ನೈಸರ್ಗಿಕವಾಗಿ ಕಂಡುಬರುವ ಜೀವರಾಸಾಯನ ವಸ್ತು[18].

**Direct use Values-** It involves human interaction with the ecosystem itself rather than *via* the services it provides. It may be consumptive or extractive use, such as fisheries or timber or it may be non consumptive as with some recreational and educational activities[19].

**ನೇರ ಉಪಯೋಗದ ಮೌಲ್ಯಗಳು:** ಸೇವೆಯನ್ನು ಒದಗಿಸುವುದಕ್ಕಿಂತಲೂ, ಇದು ಪರಿಸರ ವ್ಯವಸ್ಥೆಯೊಡನೆ ಕೊಡುಕೊಳ್ಳುವಿಕೆಯ ಕ್ರಿಯೆಯಾಗಿದೆ. ಇದು ವ್ಯಯಮಾಡುವ ಅಥವಾ ಉದ್ಧರಣದ ಬಳಕೆಗೆ (ಉದಾಹರಣೆಗೆ ಮೀನುಗಾರಿಕೆ ಅಥವಾ ಮರಮುಟ್ಟುಗಳ ಬಳಕೆ) ಅಥವಾ ಬಳಕೆಯೇತರ ಮನೋರಂಜನಾತ್ಮಕ ಮತ್ತು ಶೈಕ್ಷಣಿಕ ಚಟುವಟಿಕೆಗಳಾಗಿರಬಹುದು[19].

**Domesticated or Cultivated Species-** Species in which the evolutionary process has been influenced by humans to meet their needs[1].

**ಪಳಗಿಸಿದ ಅಥವಾ ಕೃಷಿ ಮಾಡಿದ ಪ್ರಭೇದಗಳು:** ಯಾವ ಪ್ರಭೇಧಗಳಲ್ಲಿ ಮಾನವರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕೋಸ್ಕರ ವಿಕಾಸ ಪ್ರಕ್ರಿಯೆಯನ್ನು ಮಾರ್ಪಡಿಸಿದ್ದಾರೋ ಅಂತಹ ಪ್ರಭೇಧಗಳು[1].

**Ecosystem –** A dynamic complex of plant, animal, fungi and microorganism communities and their associated non living environment interacting as a functional unit[1].

**ಪರಿಸರ ವ್ಯವಸ್ಥೆ:** ಸಸ್ಯ, ಪ್ರಾಣಿ, ಶೀಲಿಂಧ್ರ ಮತ್ತು ಸೂಕ್ಷ್ಮಾಣು ಜೀವಿ ಸಮುದಾಯಗಳ ಕ್ರಿಯಾತ್ಮಕ ಸಂಕೀರ್ಣ ಮತ್ತು ಇವುಗಳಿಗೆ ಸಂಬಂಧಿಸಿದ ಕ್ರಿಯಾತ್ಮಕ ಪರಿಸರ ಘಟಕ[1].

**Ecosystem Diversity-** The diversity of biological communities and their physical environment. Diversity is determined by the species composition, physical structure, and processes within an ecosystem. This is the highest level of biodiversity[20]

**ಪರಿಸರ ವೈವಿಧ್ಯತೆ:** ಜೈವಿಕ ಸಮುದಾಯಗಳ ವೈವಿಧ್ಯತೆ ಮತ್ತು ಅವುಗಳ ಭೌತಿಕ ಪರಿಸರವು ಜೀವ ಪ್ರಭೇಧಗಳ ಆಂತರಿಕ–ಭೌತಿಕ ರಚನೆ ಮತ್ತು ಅವುಗಳ ಒಳಗಿನ ಪ್ರಕ್ರಿಯೆಗಳಿಂದ ಪ್ರಭಾವಿತವಾಗಿದೆ. ಇದು ಅತ್ಯುನ್ನತ ಮಟ್ಟದ ಜೀವವೈವಿಧ್ಯತೆಯಾಗಿದೆ[20].

**Ecosystem Services–** Benefits people obtain from ecosystems, including food, natural fibers, a steady supply of clean water, regulation of pests and diseases, medicinal substances, recreation and protection from natural hazards such as floods. Human well-being consists of security, the basic materials for a viable livelihood (food, shelter, clothing, energy, etc., or the income necessary to purchase them), freedom and choice, good health, good social cultural relations[21].

**ಪರಿಸರ ವ್ಯವಸ್ಥೆಯ ಉಪಕೃತಿ:** ಆಹಾರ, ನೈಸರ್ಗಿಕ ನಾರು, ಶುದ್ಧ ನೀರಿನ ಪೂರೈಕೆ, ಕೀಟಗಳ ಮತ್ತು ರೋಗಗಳ ನಿಯಂತ್ರಣ, ಔಷಧೀಯ ವಸ್ತುಗಳು, ಮನೋರಂಜನೆ, ಪ್ರವಾಹಗಳಂತಹ ನೈಸರ್ಗಿಕ ವಿಕೋಪಗಳಿಂದ ಸಂರಕ್ಷಣೆ, ಇತ್ಯಾದಿಗಳಿಂದ ಜನರು ಪಡೆಯುವ ಲಾಭಗಳು. ಮಾನವನ ಯೋಗಕ್ಷೇಮವು ಅವನ ಉಪಜೀವನಕ್ಕೆ ಅವಶ್ಯಕವಾದ ಆಹಾರ, ವಸತಿ, ಇಂಧನ ಅಥವಾ ಅವುಗಳನ್ನು ಕೊಳ್ಳಲು ಬೇಕಾದ ಆದಾಯ, ಅರೋಗ್ಯ, ಮತ್ತು ಒಳ್ಳೆಯ ಸಾಮಾಜಿಕ – ಸಾಂಸ್ಕೃತಿಕ ಸಂಬಂಧಗಳ ಮೇಲೆ ಅವಲಂಬಿತವಾಗಿದೆ[21].

**Ecosystem Valuation-** The process of expressing an economic value for ecosystem goods or services (example biodiversity value, flood protection, recreational opportunity)[22].

**ಪರಿಸರ ವ್ಯವಸ್ಥೆಯ ಮೌಲ್ಯನಿರ್ಣಯ:** ಪರಿಸರದ ಸರಕುಗಳು ಅಥವಾ ಜೈವಿಕ ಸಂಪನ್ಮೂಲ ಸಂಬಂಧೀ ಸೇವೆಗಳ ಆರ್ಥಿಕ ಮೌಲ್ಯವನ್ನು ಸೂಚಿಸುವ ಪ್ರಕ್ರಿಯೆ (ಉದಾ: ಜೀವವೈವಿಧ್ಯತೆಯ ಮೌಲ್ಯ, ಪ್ರವಾಹದಿಂದ ರಕ್ಷಣೆ, ಮನೋರಂಜನೆಯ ಅವಕಾಶ)[22].

**Ex- factory price-** True price applied at the factory and does not include any other charges, such as delivery or subsequent taxes.

**ಉತ್ಪನ್ನದ ಕಾರ್ಖಾನೆಯ ಬೆಲೆ:** ಉತ್ಪನ್ನದ ಕಾರ್ಖಾನೆಯ ಬೆಲೆ ಅಂದರೆ ಉತ್ಪಾದನಾ ಬೆಲೆಯಿಂದ ವಸ್ತುವನ್ನು ತಲುಪಿಸಲು ತಗುಲುವ ಖರ್ಚು, ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಹೊರತುಪಡಿಸಿ ಮಾರಾಟ ಮಾಡುವ ಬೆಲೆ.

**Ex- factory sale-** The sale of the goods directly from the factory where the transfer happens at the factory point.

**ಕಾರ್ಖಾನೆಯಿಂದ ಮಾರಾಟ:** ಕಾರ್ಖಾನೆಯಿಂದ ನೇರವಾಗಿ ಉಂಟಾಗುವ ಸರಕುಗಳ ಮಾರಾಟ.

***Ex- Situ* Conservation-** Conservation of components of the biological diversity outside their natural habitat[1] (eg. zoo's, botanical gardens and seed banks).

**"ಹೊರನೆಲೆ ಸಂರಕ್ಷಣೆ":** ಜೈವಿಕ–ವೈವಿಧ್ಯದ ಘಟಕಗಳನ್ನು (ಉದಾ: ಮೃಗಾಲಯಗಳು, ಸಸ್ಯೋದ್ಯಾನಗಳು ಮತ್ತು ಬೀಜ ಭಂಡಾರಗಳು), ಅವುಗಳ ಸ್ವಾಭಾವಿಕ ಆವಾಸಗಳಿಂದ ಹೊರಗೆ ಸಂರಕ್ಷಿಸುವುದು[1].

**Folk Variety–** A cultivated variety of plant that was developed, grown and exchanged informally among farmers[22]

**ನಾಟಿ ತಳಿ ಪ್ರಭೇದ:** ರೈತರು ಅಭಿವೃದ್ಧಿ ಪಡಿಸಿದ, ಬೆಳೆಸಿದ ಮತ್ತು ಅವರ ನಡುವೆ ಅನೌಪಚಾರಿಕವಾಗಿ ವಿನಿಮಯ ಮಾಡಿಕೊಳ್ಳಲಾದ ಸಸ್ಯ ಪ್ರಭೇದ.[22]

**Forest ecosystem-** Comprise of entire assemblage of forest organisms (trees, shrubs, herbs, bacteria, fungi and animals including people) together with their environmental substrate (the surrounding air, soil, water, organic debris and rocks), interacting inside a defined boundary[24].

**ಅರಣ್ಯ ಪರಿಸರ ವ್ಯವಸ್ಥೆ:** ಎಲ್ಲಾ ಅರಣ್ಯ ಜೀವಿಗಳನ್ನು ಒಳಗೊಂಡಿರುವ ಸಮೂಹ (ಮರಗಳು, ಪೊದೆಗಳು, ಗಿಡಮೂಲಿಕೆಗಳು, ಶಿಲೀಂಧ್ರಗಳು ಮತ್ತು ಪ್ರಾಣಿಗಳು, ಜನರೂ ಸಹ) ಮತ್ತು ಇದರೊಂದಿಗೆ ನಿರ್ದಿಷ್ಟ ಮೇರೆಯೊಳಗೆ ಪ್ರತಿಕ್ರಿಯಿಸುವ ಅವುಗಳೊಂದಿಗಿನ ಪರಿಸರದ ವಸ್ತುಗಳು (ಸುತ್ತಲಿನ ವಾಯು, ನೀರು, ಸಾವಯವ ಅವಶೇಷಗಳು ಮತ್ತು ಬಂಡೆಗಲ್ಲುಗಳು)[24].

**Form-I** – Application form prescribed under rule 14 of the Biological Diversity Rules (2004) for securing access to biological resources and associated Traditional Knowledge under the Indian Biological Diversity Act, 2002[25].

**ನಮೂನೆ 1:** ಭಾರತದ ಜೈವಿಕ ವೈವಿಧ್ಯ ಅಧಿನಿಯಮ 2002ರ ಅಡಿ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನವನ್ನು ಪಡೆಯಲು ಜೈವಿಕ ವೈವಿಧ್ಯ ನಿಯಮಗಳು 2004 (ನಿಯಮ 14ರಲ್ಲಿ) ಮತ್ತು ಕರ್ನಾಟಕ ಜೀವವೈವಿಧ್ಯ ನಿಯಮಗಳು 2005 (ನಿಯಮ 15) ರಲ್ಲಿ ನಿಗದಿಪಡಿಸಿದ ಅರ್ಜಿ[25].

**Form-II-** Application form prescribed under the rule 17 of the Biological Diversity Rules (2004) for seeking prior approval of National Biodiversity Authority for transferring the results of research to foreign nationals, companies, NRIs for commercial purposes under the Indian Biological diversity Act 2002[25].

**ನಮೂನೆ 2:** ಭಾರತದ ಜೈವಿಕ ವೈವಿಧ್ಯ ಅಧಿನಿಯಮ 2002ರ ಅಡಿ ವಿದೇಶಿ ರಾಷ್ಟ್ರೀಯರಿಗೆ, ಕಂಪನಿಗಳಿಗೆ, ಸಂಶೋಧನೆಯ ಫಲಿತಾಂಶಗಳನ್ನು ಅನಿವಾಸಿ ಭಾರತೀಯರಿಗೆ, ವಾಣಿಜ್ಯ ಉದ್ದೇಶಗಳಿಗಾಗಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯಲು ಜೈವಿಕ ವೈವಿಧ್ಯ ನಿಯಮಗಳು 2004ರ ನಿಯಮ 17ರಲ್ಲಿ ನಿಗದಿಪಡಿಸಿದ ಅರ್ಜಿ[25].

**Form-III-** Application form prescribed under the rule 18 of the Biological Diversity Rules (2004) for seeking prior approval of National Biodiversity Authority for applying for intellectual property right under the Indian Biological Diversity Act 2002[26].

**ನಮೂನೆ 3:** ಭಾರತದ ಜೈವಿಕ ವೈವಿಧ್ಯ ಅಧಿನಿಯಮ 2002ರ ಅಡಿ ಬೌದ್ಧಿಕ ಆಸ್ತಿ ಹಕ್ಕಿಗಾಗಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯಲು ಜೈವಿಕ ವೈವಿಧ್ಯ ನಿಯಮಗಳು 2004ರ ನಿಯಮ 18ರಲ್ಲಿ ನಿಗದಿಪಡಿಸಿದ ಅರ್ಜಿ[26].

**Form-IV-** Application form prescribed under the rule 19 of the Biological Diversity Rules (2004) for seeking prior approval of National Biodiversity Authority for third party transfer of the accessed biological resources and associated traditional knowledge under Indian Biological Diversity Act 2002[27].

**ನಮೂನೆ 4:** ಭಾರತದ ಜೈವಿಕ ವೈವಿಧ್ಯ ಅಧಿನಿಯಮ 2002ರ ಅಡಿ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನವನ್ನು ಮೂರನೆಯವರಿಗೆ ವರ್ಗಾಯಿಸಲು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯಲು ಜೈವಿಕ ವೈವಿಧ್ಯ ನಿಯಮಗಳು 2004ರ ನಿಯಮ 19ರಲ್ಲಿ ನಿಗದಿಪಡಿಸಿದ ಅರ್ಜಿ[27].

**Genetic Diversity–**The variety of genetic information contained in individual plants, animals and microorganisms.

**ಅನುವಂಶಿಕ ವೈವಿಧ್ಯತೆ:** ಪ್ರತಿಯೊಂದು ಸಸ್ಯಗಳ, ಪ್ರಾಣಿಗಳ ಮತ್ತು ಸೂಕ್ಷ್ಮಾಣು ಜೀವಿಗಳಲ್ಲಿನ ಅನುವಂಶಿಕ ವೈವಿಧ್ಯತೆಯ ಮಾಹಿತಿ.

**Genetic Material-** Any material of plant, animal, microbial or other origin containing functional units of heredity[1].

**ಅನುವಂಶಿವಸ್ತು:** ಯಾವುದೇ ಸಸ್ಯ, ಪ್ರಾಣಿ, ಸೂಕ್ಷ್ಮಾಣು ಅಥವಾ ಇತರೆ ಮೂಲಗಳಲ್ಲಿರುವ ಅನುವಂಶಿಕ ಕಾರ್ಯನಿರ್ವಹಣಾ ಘಟಕ[1].

**Genetic Resources–** The genetic material contained in the biological diversity of actual and/or potential value[1].

**ಅನುವಂಶಿ ಸಂಪನ್ಮೂಲಗಳು:** ಜೈವಿಕ ವೈವಿಧ್ಯತೆಯಲ್ಲಿ ಇರಬಹುದಾದ ವಾಸ್ತವಿಕ ಅಥವಾ ಸಂಭಾವ್ಯ ಮೌಲ್ಯದ ಅನುವಂಶಿಕ ವಸ್ತು[1].

**Geographical Indication–** A sign used on goods that have a specific geographical origin and possess quality or a reputation due to that place of origin. GI consists of the name of the place of origin of the goods[29].

**ಭೌಗೋಳಿಕ ಸೂಚಕ–** ನಿರ್ದಿಷ್ಟ ಭೌಗೋಳಿಕ ಮೂಲದ, ಒಳ್ಳೆಯ ಗುಣಮಟ್ಟ ಮತ್ತು ಖ್ಯಾತಿ ಹೊಂದಿರುವ ವಸ್ತುವನ್ನು ಸೂಚಿಸಲು ಬಳಸಲಾಗುತ್ತದೆ, ಇದರಲ್ಲಿ ಸರಕುಗಳು ಉತ್ಪಾದನೆಯಾದ ಸ್ಥಳವನ್ನು ಸೇರ್ಪಡೆ ಮಾಡಲಾಗುವುದು[29].

**Intellectual Property–** Creation of the mind: inventions, literary and artistic work, and symbols, names, images, and designs used in commerce[29].

**ಬೌದ್ಧಿಕ ಆಸ್ತಿ:** ಅವಿಷ್ಕಾರಗಳು, ಸಾಹಿತ್ಯಿಕ ಮತ್ತು ಕಲಾತ್ಮಕ ಕೆಲಸ ಮತ್ತು ಚಿಹ್ನೆಗಳು, ಹೆಸರುಗಳು, ಚಿತ್ರಗಳು ಮತ್ತು ವಾಣಿಜ್ಯದಲ್ಲಿ ಉಪಯೋಗಿಸುವ ವಿನ್ಯಾಸಗಳು[29].

**Internationally Recognized Certificate-** The certificate attached with the biological/genetic resources valid internationally. The certificate should contain the following minimum information such as: (a) Issuing authority: (b) Date of issuance; (c) The provider; (d) Unique identifier of the certificate; (e) The person or entity to whom prior informed consent was granted; (f) Subject – matter or genetic resource covered by the certificate; (g) Confirmation that mutually agreed terms were established; (h) Confirmation that prior informed consent was obtained ; and (i) Commercial and/or non- commercial use[18].

**ಅಂತರಾಷ್ಟ್ರೀಯವಾಗಿ ಮಾನ್ಯತೆ ಪಡೆದ ಪ್ರಮಾಣಪತ್ರ:** ಅಂತರಾಷ್ಟ್ರೀಯವಾಗಿ ಮಾನ್ಯವಾದ ಜೈವಿಕ/ಅನುವಂಶಿ ಸಂಪನ್ಮೂಲಗಳಿಗೆ ಸಂಬಂಧಿಸಿದ ಪ್ರಮಾಣಪತ್ರವು ಮುಂದಿನ ಕನಿಷ್ಠ ಮಾಹಿತಿಯನ್ನು ಹೊಂದಿರಬೇಕು. ಅ) ಪ್ರಾಧಿಕಾರ; ಆ) ನೀಡಿದ ದಿನಾಂಕ; ಇ) ಒದಗಿಸುವವರು; ಈ) ಪ್ರಮಾಣಪತ್ರದ ವಿಶಿಷ್ಠ ಗುರುತು; ಉ) ಪೂರ್ವಾನುಮತಿಯನ್ನು ಹೊಂದಿದ ವ್ಯಕ್ತಿ ಅಥವಾ ಸಂಸ್ಥೆ; ಊ) ಪ್ರಮಾಣಪತ್ರವು ಹೊಂದಿದ ವಿಷಯ ವಸ್ತು ಅಥವಾ ವಂಶವಾಹಿ ಸಂಪನ್ಮೂಲಗಳು; ಎ) ಪರಸ್ಪರ ಒಪ್ಪಿದ ನಿಭಂದನೆಗಳು ಸ್ಥಾಪಿತವಾದ ಬಗ್ಗೆ ದೃಢೀಕರಣ; ಏ) ಪೂರ್ವಾನುಮತಿಯನ್ನು ಪಡೆದ ಬಗ್ಗೆ ದೃಢೀಕರಣ; ಮತ್ತು ಐ) ವಾಣಿಜ್ಯ ಮತ್ತು /ಅಥವಾ ವಾಣಿಜ್ಯೇತರ ಉಪಯೋಗ[18].

***In-situ* Conditions –** The conditions where genetic resources exist within ecosystems and natural habitats, and, in the case of domesticated or cultivated species, in the surroundings where they have developed their distinctive properties[1].

**ಇರುನೆಲೆ ಸ್ಥಿತಿ:** ಜೈವಿಕ ಸಂಪನ್ಮೂಲಗಳು ಇರುವ ವಸತಿ, ನೈಸರ್ಗಿಕ ಪರಿಸರ ಹಾಗೂ ಸಾಕುಪ್ರಾಣಿಗಳು ಮತ್ತು ಕೃಷಿಯಲ್ಲಿ ಬಳಸಲಾಗುವ ಜೀವಿಗಳು ತಮ್ಮ ವೈಶಿಷ್ಟ್ಯತೆಗಳೊಂದಿಗೆ ಬೆಳೆದು ಬಂದ ಪರಿಸರ[1].

***In-situ* Conservation –** Conservation of ecosystems and natural habitats and the maintenance and recovery of viable populations of species in their natural surroundings and in the case of domesticated or cultivated species, in the surroundings where they have developed their distinctive properties[30].

**ಇರುನೆಲೆ ಸಂರಕ್ಷಣೆ:** ಪರಿಸರ ವ್ಯವಸ್ಥೆ ಮತ್ತು ಸ್ವಾಭಾವಿಕ ಆವಾಸಗಳ ಸಂರಕ್ಷಣೆ ಮತ್ತು ಬದುಕಬಲ್ಲ ವಿಶಿಷ್ಟ ಪ್ರಭೇದಗಳನ್ನು ಅವುಗಳ ಸ್ವಾಭಾವಿಕ ಸನ್ನಿವೇಶಗಳಲ್ಲಿ ನಿರ್ವಹಿಸುವುದು ಮತ್ತು ಪುನಶ್ಚೇತನ (ಸಂಗ್ರಹಣೆ) ಹಾಗೂ ಬೆಳೆಸಿದ ಮತ್ತು ಕೃಷಿ ಮಾಡಿದ ಪ್ರಭೇದಗಳ ಸಂಬಂಧದಲ್ಲಿ, ಎಲ್ಲಿ ಅವುಗಳ ವಿಶಿಷ್ಟ ವರ್ಗಗಳನ್ನು ವಿಕಸನಗೊಳಿಸಲಾಗಿದೆಯೋ ಆ ಸನ್ನಿವೇಶಗಳಲ್ಲಿನ ಸಂರಕ್ಷಣೆ ಎಂದರ್ಥ[30].

**Joint Ownerships–** Refers to two parties owning property resources together.

**ಜಂಟೀ ಮಾಲೀಕತ್ವ:** ಎರಡು ಪಂಗಡಗಳ ನಡುವಿನ ಒಪ್ಪಂದಬದ್ಧ ಜಂಟೀ ಮಾಲೀಕತ್ವವನ್ನು ಸೂಚಿಸುತ್ತದೆ.

**Joint venture –** A contractual agreement joining together two or more parties for the purpose of executing a particular business undertaking. All parties agree to share in the profits and losses of the enterprise[31].

**ಜಂಟೀ ವ್ಯವಹಾರ:** ನಿರ್ದಿಷ್ಟ ಕಾರ್ಯಕ್ಕನುಗುಣವಾಗಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪಕ್ಷಗಳ ನಡುವಿನ ಒಪ್ಪಂದಬದ್ಧ ಜಂಟೀ ವ್ಯವಹಾರ; ಪಕ್ಷಗಳು ಉಂಟಾಗುವ ಎಲ್ಲ ಲಾಭಗಳನ್ನು ಮತ್ತು ನಷ್ಟಗಳನ್ನು ಹಂಚಿಕೊಳ್ಳುತ್ತವೆ[31].

**Landrace–** Primitive cultivar that was grown by ancient farmers and their successors[32].

**ಭೂತಳಿ:** ತಲತಲಾಂತರಗಳಿಂದ ರೈತರು ಬೆಳೆದುಕೊಂಡು ಬಂದಿರುವ ಕೃಷಿ ತಳಿ[32].

**Licence fee –** The fee charged for processing an application filed with the competent authority to obtain license for import or export of any biological resource.

**ಪರವಾನಗಿ ಶುಲ್ಕ:** ಯಾವುದೇ ಜೈವಿಕ ಸಂಪನ್ಮೂಲವನ್ನು ಆಮದು ಅಥವಾ ರಫ್ತು ಮಾಡುವುದಕ್ಕಾಗಿ ಪರವಾನಗಿಯನ್ನು ಪಡೆಯಲು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿದ ಅರ್ಜಿಯ ಪ್ರಕ್ರಿಯೆಗಾಗಿ ವಿಧಿಸಿದ ಶುಲ್ಕ.

**Livelihood –** A livelihood comprises people, their capabilities and their means of living, including food, income and assets. Tangible assets are resources and stores, and intangible assets are claims and access. A livelihood is environmentally sustainable when it maintains or enhances the local and global assets in which livelihoods depend, and has net beneficial effects on other livelihoods. A livelihood is socially sustainable which can cope with and recover from stress and shocks, and provide for future generations[33].

**ಜೀವನೋಪಾಯ:** ಜೀವನೋಪಾಯವು ಆಯಾ ಜನರ ಸಾಮರ್ಥ್ಯ ಹಾಗೂ ಆಹಾರ, ಆದಾಯ ಮತ್ತು ಸ್ವತ್ತುಗಳನ್ನೊಳಗೊಂಡ ಜೀವನದ ಮಾರ್ಗೋಪಾಯಗಳನ್ನು ಹೊಂದಿದೆ. ಸಂಪನ್ಮೂಲಗಳು ಮತ್ತು ಸಂಗ್ರಹ ಮಳಿಗೆಗಳು ಸ್ಪಷ್ಟವಾದ ಸ್ವತ್ತುಗಳಾಗಿವೆ. ಹಕ್ಕುಗಳು, ಬಳಕೆಗಳು ಅಸ್ಪಷ್ಟವಾದ ಸ್ವತ್ತುಗಳಾಗಿವೆ. ಜೀವನೋಪಾಯದ ಮೇಲೆ ಅವಲಂಬಿತವಾದ ಸ್ಥಳೀಯ ಮತ್ತು ಜಾಗತಿಕ ಸ್ವತ್ತುಗಳನ್ನು ಅದು ನಿರ್ವಹಣೆ ಮಾಡುತ್ತದೆ ಹಾಗೂ ಹೆಚ್ಚಿಸುತ್ತದೆ. ಅಂತಹ ಜೀವನೋಪಾಯವು ಪರಿಸರದ ದೃಷ್ಟಿಯಿಂದ ಸುಸ್ಥಿರವಾಗಿರುತ್ತದೆ ಮತ್ತು ಇತರೆ ಜೀವನೋಪಾಯಗಳ ಮೇಲೆ ನಿವ್ವಳ ಪ್ರಯೋಜನಕಾರಿ ಪರಿಣಾಮಗಳನ್ನು ಹೊಂದಿರುತ್ತದೆ. ಯಾವ ಜೀವನೋಪಾಯವು, ಒತ್ತಡ ಮತ್ತು ಆಘಾತಗಳನ್ನು ನಿಭಾಯಿಸುತ್ತದೆಯೋ ಮತ್ತು ಚೇತರಿಕೆಯನ್ನು ನೀಡುತ್ತದೆಯೋ ಅಥವಾ ಮುಂದಿನ ತಲೆಮಾರುಗಳಿಗೆ ಒದಗಿಸುತ್ತದೆಯೋ ಆ ಜೀವನೋಪಾಯವು ಸಾಮಾಜಿಕವಾಗಿ ಸುಸ್ಥಿರವಾಗಿರುತ್ತದೆ[33].

**Local Biodiversity Fund (LBF) –** Fund created at every area notified by the State Government where any institution of self-government is functioning and shall comprise of any grants or loan made by the NBA, SBB, fees if any collected, by BMCs and such other sums from other sources as may be decided upon by the State Government [34]. The LBF shall be used for conservation and promotion of biodiversity in the areas falling within the jurisdiction of the concerned local body and for the benefit of the community[35].

**ಸ್ಥಳೀಯ ಜೀವವೈವಿಧ್ಯ ನಿಧಿ:** ಸ್ವಯಂ ಅಡಳಿತವನ್ನು ಹೊಂದಿ, ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಂಸ್ಥೆಯಲ್ಲಿ ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಸ್ಥಾಪಿಸುವ ನಿಧಿ ಇದಾಗಿದೆ ಮತ್ತು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ರಾಜ್ಯ ಜೀವವೈವಿಧ್ಯ ಮಂಡಳಿಗಳಿಂದ ಯಾವುದೇ ಅನುದಾನಗಳು ಅಥವಾ ಸಾಲಗಳು, ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ಸ್ವೀಕರಿಸಿದ ಶುಲ್ಕಗಳು ಮತ್ತು ರಾಜ್ಯ ಸರ್ಕಾರವು ನಿರ್ಧರಿಸ

ಬಹುದಾದಂತಹ ಇತರೆ ಸಂಪನ್ಮೂಲಗಳಿಂದ ಪಡೆದಂತಹ ಮೊತ್ತವನ್ನು ಅದು ಒಳಗೊಂಡಿರತಕ್ಕದ್ದು[34]. ಈ ಸ್ಥಳೀಯ ಜೀವವೈವಿಧ್ಯ ನಿಧಿಯನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯ ಅಧಿಕಾರ ವ್ಯಾಪ್ತಿಯೊಳಗೆ ಜೀವವೈವಿಧ್ಯತೆಯ ಸಂರಕ್ಷಣೆ ಮತ್ತು ಉತ್ತೇಜನಕ್ಕಾಗಿ ಮತ್ತು ಸಮುದಾಯದ ಪ್ರಯೋಜನಕ್ಕಾಗಿ ಬಳಸತಕ್ಕದ್ದು[35].

**Local Bodies –** The Panchayats and Municipalities, by whatever name called[36], constituted under the Constitution of India and any other body of self-government constituted under any other law for the time being in force.

**ಸ್ಥಳೀಯ ಸಂಸ್ಥೆಗಳು:** ಯಾವುದೇ ಹೆಸರಿನಿಂದ ಕರೆಯಲಾಗುವ ಸ್ಥಳೀಯ ಸಂಸ್ಥೆ[36]. ಭಾರತದ ಸಂವಿಧಾನದಡಿ ರಚಿಸಲಾದ ಪಂಚಾಯತಿಗಳು, ಪುರಸಭೆಗಳು ಮತ್ತು ಪ್ರಸ್ತುತ ಜಾರಿಯಲ್ಲಿರುವ ಕಾಯ್ದೆ ಅಡಿ ರಚಿಸಿದ ಯವುದೇ ಇತರೆ ಸಂಸ್ಥೆ.

**Material Transfer Agreement (MTA) –** A set of administrative procedures agreed by the provider and user of genetic resources on how the accessed material could be sourced, used as well as issues of compliance to benefit sharing principles[1].

**ವಸ್ತು (ಜೈವಿಕ) ವರ್ಗಾವಣೆಗೆ ಮಾಡಿದ ಒಪ್ಪಂದ:** ಅನುವಂಶಿ ಜೀವಿಗಳಿಗೆ ಸಂಬಂದಿಸಿದಂತೆ, ಜೈವಿಕ ಸಂಪನ್ಮೂಲಗಳ ಪಡೆಯುವಿಕೆ; ಬಳಸುವಿಕೆ ಮತ್ತು ಲಾಭ ಹಂಚಿಕೆಯ ತತ್ವಗಳ ಮೇಲೆ ಅನುವಂಶಿ ಸಂಪನ್ಮೂಲಗಳ ಸರಬರಾಜುದಾರರು ಮತ್ತು ಬಳಕೆದಾರರು ಒಪ್ಪಿಕೊಂಡಿರುವ ಒಂದು ಆಡಳಿತಾತ್ಮಕ ಕಾರ್ಯವಿಧಾನ.[1]

**Monetary Benefits –** Benefits include access fee/fee per sample, collected or acquired, up-front payments, milestone payments, payments of royalties, license fee in case of commercialization, special fee, salaries and other mutually agreed research funding, joint ventures and joint ownership of relevant IPRs[18].

**ಹಣಕಾಸು ಲಾಭಗಳು:** ಲಾಭಗಳು ಎಂದರೆ, ಸಂಗ್ರಹ ಶುಲ್ಕ / ಪ್ರತಿ ಮಾದರಿಯ ಸಂಗ್ರಹ ಶುಲ್ಕ, ಬಳಕೆ ಶುಲ್ಕ, ಮುಂಗಡ ಶುಲ್ಕ, ಮೈಲಿಗಲ್ಲು ಸಂದಾಯಗಳು, ರಾಜಧನ ಸಂದಾಯಗಳು, ವಾಣಿಜ್ಯೀಕರಣಕ್ಕಾಗಿ ಪರವಾನಗಿ ಶುಲ್ಕ, ವಿಶೇಷ ಶುಲ್ಕ, ವೇತನಗಳು ಮತ್ತು ಪರಸ್ಪರ ಒಪ್ಪಿದ ಇತರೆ ಸಂಶೋಧನೆಗೆ ಸಹಾಯನಿಧಿ, ಜಂಟಿ ಉದ್ಯಮಗಳು ಮತ್ತು ಬೌದ್ಧಿಕ ಆಸ್ತಿಹಕ್ಕುಗಳ ಜಂಟೀ ಮಾಲೀಕತ್ವ[18].

**Mutually Agreed Terms (MAT) -** A set of terms and conditions agreed between the provider and user of genetic resources for prospecting purposes[1].

**ಪರಸ್ಪರ ಒಪ್ಪಿಗೆಯಾದ ನಿಯಮಗಳು:** ಅನ್ವೇಷಣೆಯ ಉದ್ದೇಶಕ್ಕಾಗಿ ಅನುವಂಶಿ ಸಂಪನ್ಮೂಲಗಳ ವಾರಸುದಾರರ ಮತ್ತು ಬಳಕೆದಾರರ ನಡುವೆ ಪರಸ್ಪರ ಒಪ್ಪಿಗೆಯಾದ ನಿಯಮಗಳು ಮತ್ತು ಷರತ್ತುಗಳು[1].

**National Biodiversity Fund (NBF) –** A fund created at national level consisting of all grants and loans made by the Central Government to the NBA. All charges, royalties received by the NBA and all other sums received from other sources as may be decided upon by the Central Government[37].

**ರಾಷ್ಟ್ರೀಯ ಜೈವಿಕ ವೈವಿಧ್ಯ ನಿಧಿ:** ಕೇಂದ್ರ ಸರ್ಕಾರವು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರಕ್ಕೆ ಮಾಡಲಾದ ಎಲ್ಲಾ ಅನುದಾನಗಳು ಮತ್ತು ಸಾಲಗಳನ್ನೊಳಗೊಂಡು ರಾಷ್ಟ್ರ ಮಟ್ಟದಲ್ಲಿ ರಚಿಸಿದ ನಿಧಿ. ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಸ್ವೀಕರಿಸಿದ ಎಲ್ಲಾ ಶುಲ್ಕ, ರಾಜಧನ ಮತ್ತು ಕೇಂದ್ರ ಸರ್ಕಾರವು ನಿರ್ಧರಿಸಬಹುದಾದ ಇತರ ಎಲ್ಲಾ ಹಣಕಾಸಿನ ಮೂಲಗಳಿಂದ ಪಡೆದ ಮೊತ್ತ[37].

**National Focal point –** The national focal point shall be responsible national entity for liaison with CBD secretariat and also to make information available for applicants seeking access to genetic resources[7].

**ರಾಷ್ಟ್ರೀಯ ಕೇಂದ್ರ ಬಿಂದು:** ಅನುವಂಶಿ ಸಂಪನ್ಮೂಲಗಳ ಬಳಕೆಗಾಗಿ ಅನುಮತಿ ಕೋರುವ ಅರ್ಜಿದಾರರಿಗೆ ಮಾಹಿತಿ ಲಭ್ಯವಾಗುವಂತೆ ಮಾಡಲು ಹಾಗೂ ಜೈವಿಕ ವೈವಿಧ್ಯ ಸಮಾವೇಶದ ಸಚಿವಾಲಯದ ನಡುವೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸಲು ರಾಷ್ಟ್ರೀಯ ಕೇಂದ್ರ ಬಿಂದುವು ಜವಾಬ್ದಾರಿ ಹೊಂದಿದ ಒಂದು ರಾಷ್ಟ್ರೀಯ ಸಂಸ್ಥೆಯಾಗಿದೆ[7].

**Net Sale –** The amount of sales generated by a company after the deduction of returns, allowances for damaged or missing goods and any discounts allowed[31].

**ನಿವ್ವಳ ಮಾರಾಟ:** ಸಂಸ್ಥೆಯ ಒಟ್ಟು ಉತ್ಪನ್ನದಿಂದ ವಾಪಾಸಾದ, ಹಾಳಾದ, ಅಥವಾ ಕಳೆದುಹೋದ ಮತ್ತು ವಿನಾಯಿತಿಗೊಳಗಾದ ವಸ್ತುಗಳನ್ನು ಹೊರತುಪಡಿಸಿ ಉಂಟಾದ ನಿವ್ವಳ ಮಾರಾಟ[31].

**Non – Monetary Benefits –** The non monetary benefits are benefits that include sharing of research and development, results collaboration and cooperation in research and development, participation in product development, collaboration and cooperation in education and training, admittance to *ex-situ* facilities of genetic resources and databases, transfer of knowledge and information in concessional terms, capacity building activities, specific and targeted training, access to scientific information in preferential terms, contributions to local development plans and economic activities, social recognition and joint ownership of IPRs[18].

**ಹಣಕಾಸೇತರ ಲಾಭಗಳು:** ಹಣಕಾಸೇತರ ಲಾಭಗಳೆಂದರೆ ಸಂಶೋಧನೆ ಮತ್ತು ಅಭಿವೃದ್ಧಿಯ ಫಲಿತಾಂಶದ ಹಂಚಿಕೆ, ಸಂಶೋಧನೆ ಮತ್ತು ಅಭಿವೃದ್ಧಿಯ ಫಲಿತಾಂಶಗಳಲ್ಲಿ ಸಹಯೋಗ ಮತ್ತು ಸಹಕಾರ, ಉತ್ಪನ್ನ ಅಭಿವೃದ್ಧಿಯಲ್ಲಿ ಭಾಗವಹಿಸುವಿಕೆ, ಶಿಕ್ಷಣ ಮತ್ತು ತರಬೇತಿಗಳಲ್ಲಿ ಸಹಯೋಗ ಮತ್ತು ಸಹಕಾರ, ಹೊರ ವಂಶವಾಹಿ ಸಂಪನ್ಮೂಲಗಳು ಮತ್ತು ದತ್ತಾಂಶಗಳಿಗೆ ಪ್ರವೇಶಾವಕಾಶ, ರಿಯಾಯಿತಿ ನಿಬಂಧನೆಗಳಲ್ಲಿ ಜ್ಞಾನದ ಮತ್ತು ಮಾಹಿತಿಯ ವರ್ಗಾವಣೆ ಮತ್ತು ಸಾಮರ್ಥ್ಯ ನಿರ್ಮಾಣ ಚಟುವಟಿಕೆಗಳು, ವಿಶೇಷ ಗುರಿಹೊಂದಿದ ತರಬೇತಿ, ಆದ್ಯತೆಯ ಆಧಾರದಲ್ಲಿ ವೈಜ್ಞಾನಿಕ ಮಾಹಿತಿಯ ಬಳಕೆ, ಸ್ಥಳೀಯ ಯೋಜನೆಗಳು ಮತ್ತು ಆರ್ಥಿಕ ಚಟುವಟಿಕೆಗಳಿಗೆ ನಿಯಮಗಳು, ಸಾಮಾಜಿಕ ಮಾನ್ಯತೆ ಮತ್ತು ಬೌದ್ಧಿಕ ಆಸ್ತಿಹಕ್ಕುಗಳ ಜಂಟೀ ಮಾಲೀಕತ್ವದಂತಹ ಲಾಭಗಳು ಹಣಕಾಸೇತರ ಲಾಭಗಳಾಗಿವೆ[18].

**Normally Traded as Commodities (NTACs) –** The Ministry of Environment and Forests, Government of India, had issued a notification containing bioresources that are exempted from the perview of the Biological Diversity Act 2002, under Section 40. These are the resources used in commodity trade for purpose of specific use[38].

**ಸಾಮಾನ್ಯವಾಗಿ ವ್ಯಾಪಾರ ಮಾಡಬಹುದಾದ ಸರಕು ಪದಾರ್ಥಗಳು:** ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯವು ಅಧಿಸೂಚನೆಯನ್ನು ಹೊರಡಿಸಿದ್ದು ಅದು ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 40ರ ವ್ಯಾಪ್ತಿಯಲ್ಲಿ ಕೆಲವೊಂದು ಜೈವಿಕ ಸಂಪನ್ಮೂಲಗಳನ್ನು ಸಾಮಾನ್ಯವಾಗಿ ಮಾರಾಟವಾಗುವ ಸರಕು ಪದಾರ್ಥ ಎಂದು ಘೋಷಿಸಿದೆ. ಇಂತಹ ವಿನಾಯತಿಯು ಆ ಪದಾರ್ಥದ ಸಾಮಾನ್ಯ ಮಾರಾಟಕ್ಕೆ ಮಾತ್ರ ಅನ್ವಯವಾಗುತ್ತದೆ ಮತ್ತು ಬೇರೆ ಯಾವುದೇ ಉದ್ದೇಶಕ್ಕಲ್ಲ[38].

**Oleoresins –** A natural mixture of an essential oil and a resin as found in certain plants such as pine or balsam fir[39].

**ಒಲಿಯೋರೆಸಿನ್:** ದೇವದಾರು ಮತ್ತು ಸುಗಂಧ ನೀಡುವ ಕೆಲವು ಮರದ ಸಸ್ಯಗಳಲ್ಲಿ ಕಂಡುಬರುವ ನೈಸರ್ಗಿಕ ಎಣ್ಣೆಗಳ ಮತ್ತು ಅಂಟುಗಳ ಮಿಶ್ರಣಗಳು[39].

**Patent –** Means a statutory right for an invention granted for a limited period of time to the patentee by the government, in exchange of full disclosure of his/her invention for excluding others, from making, using, selling, importing the patented product or process for producing that product for those purposes without his consent[40].

**ಬೌದ್ಧಿಕ ಆಸ್ತಿ ಹಕ್ಕು ದಾಖಲೆ (ಪೇಟೆಂಟ್):** ಸರಕಾರದಿಂದ ಸಂಶೋಧಕನಿಗೆ ನಿಗದಿತ ಅವಧಿಗೆ ಮಂಜೂರು ಮಾಡಿದ ಶಾಸನಬದ್ಧ ಬೌದ್ಧಿಕ ಹಕ್ಕು. ಸಂಶೋಧನೆಯ ಫಲಿತಾಂಶಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿದರೆ ಅಂತಹ ವಿಶೇಷ ಹಕ್ಕುಗಳನ್ನು ಸಂಶೋಧಕನಿಗೆ ಮಾತ್ರ ಸರಕಾರವು ಗೊತ್ತುಪಡಿಸಿದ ಅವಧಿಗೆ ಕೊಡುವುದು. ಬೌದ್ಧಿಕ ಆಸ್ತಿ ಹಕ್ಕುಗಳು (ಪೇಟೆಂಟ್ಸ್) ತಾವೇ ಸ್ವಯಂ ಆಗಿ ಏನನ್ನೂ ಮಂಜೂರು ಮಾಡುವುದಿಲ್ಲ. ಆದರೆ ಬೌದ್ಧಿಕ ಆಸ್ತಿ ಹಕ್ಕುಗಳಿಗೊಳಪಟ್ಟ ವಸ್ತುವನ್ನು / ವಿಧಾನವನ್ನು, ಅನ್ಯರು ಉಪಯೋಗಿಸುವ/ತಯಾರಿಸುವ/ಆಮದು ಮಾಡಿಕೊಳ್ಳುವುದನ್ನು ತಡೆಯುವ ಕಾನೂನು ಮಾರ್ಗೋಪಾಯಗಳನ್ನು ಸಂಶೋಧಕನಿಗೆ ಒದಗಿಸುತ್ತದೆ[40].

**Peoples Biodiversity Register (PBR) –** It is a register that contains comprehensive information on availability and knowledge of local biological resources their medicinal or any other use and any other traditional knowledge associated with them[41]. The preparation of PBR is mandated under the Indian Biological Diversity Act 2002.

**ಜನತಾ ಜೀವವೈವಿಧ್ಯ ದಾಖಲಾತಿ:** ಈ ದಾಖಲಾಯತಿಯು ಸ್ಥಳೀಯ ಜೈವಿಕ ಸಂಪನ್ಮೂಲಗಳ ಲಭ್ಯತೆ ಮತ್ತು ಜ್ಞಾನ, ಹಾಗೂ ಅವುಗಳ ಔಷಧೀಯ ಅಥವಾ ಇತರೆ ಉಪಯೋಗ ಮತ್ತು ಅವುಗಳಿಗೆ ಸಂಬಂಧಿಸಿದ ಇತರೆ ಸಾಂಪ್ರದಾಯಿಕ ಜ್ಞಾನಗಳ ಸಮಗ್ರ ಮಾಹಿತಿಯನ್ನು ಹೊಂದಿರುತ್ತದೆ[41]. ಭಾರತೀಯ ಜೈವಿಕ ವೈವಿಧ್ಯ ಅಧಿನಿಯಮ 2002ರಡಿ ಈ ದಾಖಲಾತಿಯನ್ನು ತಯಾರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

**Prior Informed Consent (PIC) -** A set of administrative procedures for deciding on whether to grant access to biological resources on defined terms[42].

**ಮುಂಚಿತವಾಗಿ ಸೂಚಿತವಾದ ಸಮ್ಮತಿ (Prior Informed Consent):** ಪೂರ್ವನಿರ್ಧರಿತವಾದ ಷರತ್ತುಗಳಿಗೆ ಅನುಗುಣವಾಗಿ, ಕಾನೂನಾತ್ಮಕವಾದ ವಿಧಿವಿಧಾನಗಳ ಮೂಲಕ ಜೈವಿಕ ಸಂಪನ್ಮೂಲಗಳ ಬಳಕೆಗೆ ಅನುಮತಿ ನೀಡುವ ಪ್ರಕ್ರಿಯೆ[42].

**Protected Area –** A geographically defined area which is designated or regulated and managed to achieve specific conservation objectives[14].

**ಸಂರಕ್ಷಿತ ಪ್ರದೇಶ:** ವಿಶೇಷ ಸಂರಕ್ಷಣೆ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಗೊತ್ತುಪಡಿಸಿದ, ನಿರ್ವಹಣೆಗೊಳಪಟ್ಟ ಭೌಗೋಳಿಕ ಪ್ರದೇಶ[14].

**Provider –** A person who provides the biological resources.

**ಒದಗಿಸುವವರು:** ಜೈವಿಕ ಸಂಪನ್ಮೂಲಗಳನ್ನು ಒದಗಿಸುವ ವ್ಯಕ್ತಿ.

**Royalties –** Sources of payment for an inventor who holds the patent for a particular product or process. Royalties accrue when some one uses the patented product or process[1].

**ಗೌರವಧನ:** ನಿರ್ದಿಷ್ಟ ಉತ್ಪನ್ನ ಅಥವಾ ಸಂಸ್ಕರಣೆಗಾಗಿ ಯಾರು ಬೌದ್ಧಿಕ ಆಸ್ತಿಹಕ್ಕುಗಳನ್ನು ಹೊಂದಿರುತ್ತಾರೋ ಆ ಸಂಶೋಧಕರಿಗೆ ಸಂದಾಯವಾಗುವ ಮೌಲ್ಯ. ಬೌದ್ಧಿಕ ಆಸ್ತಿಹಕ್ಕುಗಳಿಗೊಳಪಟ್ಟ ಉತ್ಪನ್ನ ಅಥವಾ ವಿಧಾನವನ್ನು ಅನ್ಯರು ಉಪಯೋಗಿಸಿದಾಗ ಸಂಶೋಧಕರಿಗೆ ಸಿಗುವ ಗೌರವಧನ[1].

**Research –** The study or systematic investigation of any biological resource or technological application that uses biological systems, living organisms or derivatives thereof to make or modify products or processes for any use[43].

**ಸಂಶೋಧನೆ:** ಯಾವುದೇ ಬಳಕೆಗಾಗಿ ಉತ್ಪನ್ನಗಳನ್ನು ಅಥವಾ ಅವುಗಳ ಸಂಸ್ಕರಣಗಳನ್ನು ಮಾಡಲು ಅಥವಾ ಪರಿವರ್ತಿಸಲು ಜೈವಿಕ ವ್ಯವಸ್ಥೆಗಳು, ಸಜೀವಿಗಳು ಅಥವಾ ಅದರಿಂದ ಉತ್ಪನ್ನವಾದವುಗಳನ್ನು ಉಪಯೋಗಿಸಿಕೊಂಡು ಮಾಡುವ ತಾಂತ್ರಿಕ ಅನ್ವಯದ ಅಧ್ಯಯನ ಅಥವಾ ವ್ಯವಸ್ಥಿತ ಸಂಶೋಧನೆ[43].

**State Biodiversity Boards (SBBs) –** The SBBs are body corporate established as per Section 22 of the Indian Biological Diversity Act by the State Governments for conservation of biological diversity, sustainable use of biological resources and equitable sharing of benefits arising out of the use of biological resources[44].

**ರಾಜ್ಯ ಜೀವವೈವಿಧ್ಯ ಮಂಡಳಿಗಳು:** ಈ ಮಂಡಳಿಗಳು ಜೈವಿಕ ವೈವಿಧ್ಯ ಸಂರಕ್ಷಣೆ, ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಬರುವ ಲಾಭಗಳ ನ್ಯಾಯಸಮ್ಮತ ಹಂಚಿಕೆಗಾಗಿ ಭಾರತೀಯ ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 22 ರಡಿ ರಾಜ್ಯ ಸರ್ಕಾರಗಳು ಸ್ಥಾಪಿಸಿದ ಕಾರ್ಪೋರೇಟ್ ಸಂಸ್ಥೆಗಳಾಗಿವೆ[44].

**State Biodiversity Fund (SBF) -** The fund created under the BD Act at State level that facilitates receipt of any grants and loans made to the SBB, any grants or loans made by NBA, all sums received by the SBB from such other sources as may be decided upon by the State Government [45].

**ರಾಜ್ಯ ಜೀವವೈವಿಧ್ಯ ನಿಧಿ:** ಜೈವಿಕ ವೈವಿಧ್ಯ ಅಧಿನಿಯಮದಡಿ ರಾಜ್ಯ ಮಟ್ಟದಲ್ಲಿ ಸ್ಥಾಪಿಸಿದ ನಿಧಿ ಇದಾಗಿದೆ. ರಾಜ್ಯ ಜೀವವೈವಿಧ್ಯ ಮಂಡಳಿಗೆ ನೀಡಲಾದ ಯಾವುದೇ ಅನುದಾನಗಳು ಮತ್ತು ಸಾಲಗಳು, ಎನ್‌ಬಿಎಯಿಂದ ನೀಡಲಾದ ಯಾವುದೇ ಅನುದಾನಗಳು ಮತ್ತು ಸಾಲಗಳು, ರಾಜ್ಯ ಸರ್ಕಾರದಿಂದ ನಿರ್ಧರಿಸಬಹುದಾದಂತಹ ಇತರ ಮೂಲಗಳಿಂದ ಸ್ವೀಕರಿಸಿದ ಎಲ್ಲಾ ಮೊತ್ತಗಳನ್ನು ಸ್ವೀಕರಿಸಲು ಇದು ಅವಕಾಶ ನೀಡುತ್ತದೆ[45].

**Sustainable Use –** The use of components of biological diversity by such means and at such rate that does not lead to long-term decline of biological diversity, thereby maintaining its potential to meet the needs and aspirations of present and future generations[14].

**ಸುಸ್ಥಿರ ಬಳಕೆ:** ಜೈವಿಕ ವೈವಿಧ್ಯದ ದೀರ್ಘಕಾಲಿಕ ಅವನತಿಗೆ ಆಸ್ಪದ ನೀಡದಂತಹ ರೀತಿಯಲ್ಲಿ ಮತ್ತು ಅಂತಹ ಪ್ರಮಾಣದಲ್ಲಿ ಜೈವಿಕ ವೈವಿಧ್ಯದ ಘಟಕಾಂಶಗಳನ್ನು ಬಳಸುವ ಮೂಲಕ ಈಗಿನ ಮತ್ತು ಮುಂದಿನ ಜನಾಂಗಗಳ ಅಗತ್ಯತೆ ಮತ್ತು ಆಕಾಂಕ್ಷೆಗಳನ್ನು ಪೂರೈಸಲು ಅದರ ಸಾಮರ್ಥ್ಯತೆಯನ್ನು ಕಾಪಾಡುವುದು[14].

**Technical Support Group (TSG) –** Group of experts from various disciplines and line departments, universities, research institutes, colleges, and schools and non-government organizations. The TSG is established to provide technical inputs and advice to the BMCs on identification of plants and animals, monitor and evaluate the PBR exercise, examine confidential information and advice on legal protection, maintain a database of local and external experts on biodiversity[41].

**ತಾಂತ್ರಿಕ ಸಲಹಾ ಗುಂಪು:** ವಿವಿಧ ವಿಷಯಗಳ ಪರಿಣಿತರು ಮತ್ತು ಇಲಾಖೆಗಳ, ವಿಶ್ವವಿದ್ಯಾಲಯಗಳ, ಸಂಶೋಧನಾ ಸಂಸ್ಥೆಗಳ, ಕಾಲೇಜುಗಳ ಮತ್ತು ಶಾಲೆಗಳ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ಆಯ್ಕೆ ಮಾಡಿದ ತಜ್ಞರ ಗುಂಪು. ಇದು ಸಸ್ಯಗಳು, ಪ್ರಾಣಿಗಳನ್ನು ಗುರುತಿಸಲು ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ತಾಂತ್ರಿಕ ಮಾಹಿತಿ ಹಾಗೂ ಸಲಹೆಗಳನ್ನು ಒದಗಿಸಲು ಮತ್ತು ಜನತಾ ಜೀವವೈವಿಧ್ಯ ದಾಖಲಾತಿ ಚಟುವಟಿಕೆಗಳ ಉಸ್ತುವಾರಿ ಮತ್ತು ಅಧ್ಯಯನವನ್ನು ಮಾಡಲು, ಗೌಪ್ಯ ಮಾಹಿತಿಯನ್ನು ಪರೀಕ್ಷಿಸಿಲು ಮತ್ತು ಕಾನೂನು ರಕ್ಷಣೆ. ಜೈವಿಕ ವೈವಿಧ್ಯತೆಯ ಸ್ಥಳೀಯ ಮತ್ತು ಬಾಹ್ಯ ತಜ್ಞರ ದತ್ತಾಂಶವನ್ನು ನಿರ್ವಹಿಸುವ ಕುರಿತು ಸಲಹೆ ನೀಡಲು ರಚಿಸಲಾಗಿರುವ ತಾಂತ್ರಿಕ ಸಲಹಾಗುಂಪು[41].

**Technology Transfer –** To collaborate and cooperate among the parties in technical and scientific research and development programmes, including biotechnological research activities[18].

**ತಂತ್ರಜ್ಞಾನ ವರ್ಗಾವಣೆ:** ಜೈವಿಕ ವೈವಿಧ್ಯ ಸಂಶೋಧನಾ ಚಟುವಟಿಕೆಗಳೂ ಸೇರಿದಂತೆ ತಾಂತ್ರಿಕ ಮತ್ತು ವೈಜ್ಞಾನಿಕ ಸಂಶೋಧನೆ, ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಎಲ್ಲಾ ಪಕ್ಷಗಳ ಮಧ್ಯೆ ಸಹಯೋಗ ಮತ್ತು ಸಹಕಾರವನ್ನು ತರುವುದು[18].

**Third Party Transfer –** Transfer of material, knowledge and/or products arising from access to a party other than the user as identified in the PIC, MAT and/or benefit sharing agreements[1].

**ಮೂರನೆಯ ವ್ಯಕ್ತಿಗೆ/ಕಂಪನಿಗೆ ಹಸ್ತಾಂತರ ಮಾಡುವುದು:** ಪೂರ್ವನಿರ್ಧರಿತವಾದ ಷರತ್ತುಗಳಿಗೆ ಅನುಗುಣವಾಗಿ, ಪರಸ್ಪರ ಒಪ್ಪಿತವಾದ ಷರತ್ತುಗಳು ಮತ್ತು/ಅಥವಾ ಲಾಭದ ಹಂಚಿಕೆ ವ್ಯವಸ್ಥೆಗಳಲ್ಲಿ ಗುರುತಿಸಿದ ಬಳಕೆದಾರನ ಬದಲಿಗೆ ಇತರರು ಅಥವಾ ಮೂರನೆಯವರ ಬಳಕೆಗೆ ವಸ್ತು, ಜ್ಞಾನ ಅಥವಾ ಉತ್ಪನ್ನಗಳನ್ನು ವರ್ಗಾವಣೆ ಮಾಡುವುದು[1].

**Threatened Species –** Threatened species are any species (including animals, plants, fungi, etc.) which are vulnerable to endangerment in the near future [14].

**ಅಳಿವಿನಂಚಿನಲ್ಲಿರುವ ಪ್ರಭೇಧಗಳು:** ಸಂಕಷ್ಟದಲ್ಲಿರುವ ಪ್ರಭೇಧಗಳು ಎಂದರೆ ಸದ್ಯೋಭವಿಷ್ಯತ್ತಿನಲ್ಲಿ ಅಳಿವಿನಂಚಿಗೆ ಸರಿಯುತ್ತಿರುವ ಯಾವುದೇ ಪ್ರಾಣಿ, ಸಸ್ಯ, ಶಿಲೀಂಧ್ರ ಮುಂತಾದವುಗಳ ಪ್ರಭೇಧಗಳು[14].

**Trade –** Trade is the transfer of ownership of goods and services from one person or entity to another by getting something in exchange from the buyer.

**ವ್ಯಾಪಾರ:** ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯಿಂದ ಮತ್ತೊಬ್ಬರಿಗೆ ಸರಕು ಮತ್ತು ಸೇವೆಗಳ ಮಾಲೀಕತ್ವವನ್ನು ವರ್ಗಾಯಿಸುವುದೇ ವ್ಯಾಪಾರ. ಕೊಳ್ಳುವವರು ತಾವು ಪಡೆಯುವುದಕ್ಕೆ ಬದಲಿಗೆ ಏನಾದರೊಂದನ್ನು ಕೊಡುತ್ತಾರೆ.

**Trade agreements –** A negotiated agreement among two or more countries, individuals or organisations to limit or alter their policies with respect to trade.

**ವ್ಯಾಪಾರ ಒಪ್ಪಂದಗಳು:** ವ್ಯಾಪಾರಕ್ಕೆ ಸಂಬಂಧಿಸಿದ ತಮ್ಮ ನೀತಿಗಳನ್ನು ಮಿತಿಗೊಳಿಸಲು ಅಥವಾ ಬದಲಾವಣೆ ಮಾಡಲು ಎರಡು ಅಥವಾ ಹೆಚ್ಚು ದೇಶಗಳು, ವ್ಯಕ್ತಿಗಳು ಅಥವಾ ಸಂಸ್ಥೆಗಳ ಮಧ್ಯೆ ಮಾಡಿಕೊಂಡ ಒಪ್ಪಂದ.

**Traditional Knowledge –** The knowledge innovations and practices of local and indigenous communities relevant to conservation and sustainable use of biological diversity[1].

**ಸಾಂಪ್ರದಾಯಿಕ ಜ್ಞಾನ:** ಜೈವಿಕ ವೈವಿಧ್ಯತೆಯ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಗೆ ಸಂಬಂಧಿಸಿದ ಸ್ಥಳೀಯ ಮತ್ತು ದೇಶಿಯ ಸಮುದಾಯಗಳ ಜ್ಞಾನದ ನಾವೀಣ್ಯತೆಗಳು ಮತ್ತು ಆಚರಣೆಗಳು[1].

**Up-Front Payments-** Up-front Payments is anything of value; usually money, delivered at the time a contract is signed.

**ಮುಂಗಡ ಸಂದಾಯಗಳು:** ಮುಂಗಡ ಸಂದಾಯಗಳು ಎಂದರೆ ಒಪ್ಪಂದಕ್ಕೆ ಸಹಿ ಹಾಕುವ ಸಮಯದಲ್ಲಿ ಯಾವುದೇ ಮೌಲ್ಯಯುಕ್ತವಾದದ್ದು ಅಂದರೆ ಸಾಮಾನ್ಯವಾಗಿ ಹಣವನ್ನು ವಿತರಿಸುವುದು.

**Utilization of NBF –** The National Biodiversity Fund shall be applied for channelling benefits to the benefit claimers, conservation and promotion of biological resources and development of areas from where such biological resources or knowledge associated thereto has been accessed and for socio-economic development of areas in consultation with the local bodies[46].

**ರಾಷ್ಟ್ರೀಯ ಜೀವವೈವಿಧ್ಯ ನಿಧಿಯ ಬಳಕೆ:** ರಾಷ್ಟ್ರೀಯ ಜೈವಿಕ ವೈವಿಧ್ಯ ನಿಧಿಯನ್ನು ಲಾಭದ ಕ್ಲೇಮುದಾರರಿಗೆ ನೀಡುವುದಕ್ಕೆ, ಜೈವಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಉತ್ತೇಜನಕ್ಕಾಗಿ ಹಾಗೂ ಯಾವ ಪ್ರದೇಶಗಳಿಂದ ಅಂತಹ ಜೈವಿಕ ಸಂಪನ್ಮೂಲಗಳು ಅಥವಾ ಅದಕ್ಕೆ ಸಂಬಂಧಿಸಿದ ಜ್ಞಾನ ಪ್ರಾಪ್ತವಾಗಿದೆಯೋ ಅಂತಹ ಸ್ಥಳಗಳ ಅಭಿವೃದ್ಧಿಗೆ ಸ್ಥಳೀಯ ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಪ್ರದೇಶಗಳ ಅಭಿವೃದ್ಧಿಗೆ ಬಳಸತಕ್ಕದ್ದು[46].

**Value Added Products –** Products which may contain portions or extracts of plants and animals in unrecognizable and physically inseparable form[47].

**ಮೌಲ್ಯ ವರ್ಧಿತ ಉತ್ಪನ್ನಗಳು:** ಗುರುತು ಹಿಡಿಯಲಾಗದಂತೆ ಮತ್ತು ಭೌತಿಕವಾಗಿ (ವಾಸ್ತವಿಕವಾಗಿ) ಬೇರ್ಪಡಿಸಲಾಗದಂತೆ ಸಸ್ಯಗಳು ಮತ್ತು ಪ್ರಾಣಿಗಳ ಭಾಗ ಅಥವಾ ಸಾರವನ್ನು ಒಳಗೊಂಡಿರುವ ಉತ್ಪನ್ನಗಳು[47].

**Venture Capital Fund –** It is a financial capital provided to early-stage, high-potential, high-risk, growth startup companies. The VC fund earns money by owning equity in the companies it invests in, which usually have a novel technology or business model in high technology industries[14].

**ಉದ್ಯಮ ಬಂಡವಾಳ ನಿಧಿ:** ಅತಿ ಹೆಚ್ಚು ಬೆಳವಣಿಗೆ ಸಾಧ್ಯತೆ ಅಥವಾ ಅತಿ ಹೆಚ್ಚು ವೈಫಲ್ಯ ಸಾಧ್ಯತೆ ಇರುವ ಮತ್ತು ನೂತನ ತಂತ್ರಜ್ಞಾನ ಅಥವಾ ನೂತನ ವ್ಯವಹಾರಿಕ ಮಾದರಿ ಹೊಂದಿರುವ ಉದ್ಯಮಗಳಿಗೆ ಪ್ರಾರಂಭಿಕ ಹಂತದಲ್ಲಿ ಆರ್ಥಿಕ ಸಹಾಯ ಒದಗಿಸುವ ಸಾಹಸೋದ್ಯಮ ಬಂಡವಾಳ[14].

## References


1. Balakrishna, P. 2007. UNU-IAS Pocket Guide, Access to Genetic Resources, Benefit Sharing and Bio-Prospecting. Published by United National University – Institute of Advanced Studies, Japan (Adopted from the pocket guide and modified as specified in Biological Diversity Act, 2002).

2. Webster's New World Law Dictionary, Wiley Publications Inc.

3. Section 2 (e) of the Indian Contract Act, 1872.
   ಭಾರತೀಯ ಒಪ್ಪಂದ ಅಧಿನಿಯಮ, 1872 ರ ಪ್ರಕರಣ 2 (e)

4. Crop Farming review: Towards an Informed application of Science and Agriculture (www.cropsreview.com).

5. Section 13(1) Explanation – of the Biological Diversity Act, 2002.
   ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 13 (1)

6. Section 2(a) The Biological Diversity Act, 2002.
   ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 2 (a)

7. Section 21 (1&2) the Biological Diversity Act, 2002.
   ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 21 (1&2)

8. Guidelines for Selection and Management of the Biodiversity Heritage Site, 2009 and amended during 2011, Published by the National Biodiversity Authority.

9. The Kate etal, 2004. EIA guidelines and information document series, information document on biodiversity offsets, 2011. Issued by the Department of Environment Affairs and Development planning, South Africa.

10. Section 41(1) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 41 (1)

11. Section 2(b) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 2 (b)

12. Section 2(c) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 2 (c)

13. Section 2(d) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 2 (d)

14. Wikipedia (http://en.wikipedia.org)

15. Convention on Biological Diversity (www.cbd.int)

16. Section 2(f) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 2 (ಜಿ)

17. Section 41(1) a of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 41 (1)a

18. Nagoya Protocol on Access to Genetic Resources and the fair and equitable sharing of benefits arising from their utilization to CBD. Published by the Secretariat of CBD, Montreal.

19. The economic, social and ecological value of ecosystems services; A literature review, 2005 Published by Economics for Environment Consultancy, London.

20. Super Glossary (www.superglossary.com)

21. Antony McMichael, Robert et al. Ecosystems and human well-being: Sub global. Chapter -3. Linking Ecosystem services and Human Being

22. Stephen C. Farber, Robert Costanzia and Matthew A. Wilson. Economic and Ecological concepts for valuating ecosystems services. Ecological Economics 4 (2002), Published by Elsevier. Vol. 41, issue3, pages 375-392.

23. Section 41(1) b of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 41(1)b

24. McGraw-Hill Dictionary of scientific technical terms, 6th edition, published by the McGraw-Hill companies, Inc. Second Edition, New York, USA.

25. Rule 14 of the Biological Diversity Rules, 2004.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 14

26. Rule 17 of the Biological Diversity Rules, 2004.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 17

27. Rule 18 of the Biological Diversity Rules, 2004.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 18

28. Rule 19 of the Biological Diversity Rules, 2004.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 19

29. WIPO web resource (www.wipo.int)

30. Article 2 of the Convention on Biological Diversity.

31. Web resource url: www.investorwords.com.

32. Section 41(1) c of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 41(1)c

33. Partners International Foundation (www.partners.International .org)

34. Section 43(1) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 43(1)

35. Section 44(2) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 44(2)

36. Section 2(h) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 2(h)

37. Section 27(1) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 27(1)

38. MoEF Notification, So.2726(E) dated 26th October,2009.

39. The Free Dictionary (www.thefreedictionary.com)

40. Web Resource url: www.ipIndia.nic.in

41. People's Biodiversity Register, 2009. Publication by NBA.

42. Adopted from the Pocket Guide and modified as specified in Biological Diversity Act, 2002.

43. Section 2(m) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 2(m))

44. Section 23 of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 23

45. Section 32(1) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 32(1)

46. Section 27(2) of the Biological Diversity Act, 2002.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 27(2)

47. Section 2(p) of the Biological Diversity Act, 2002 - value added product.
ಜೈವಿಕ ವೈವಿಧ್ಯ ಅಧಿನಿಯಮ 2002 ರ ಪ್ರಕರಣ 2(p) –value added products.

## About NBA

The National Biodiversity Authority (NBA) was established in 2003 to implement India's Biological Diversity Act, 2002. The NBA is a statutory, autonomous body and it performs facilitative, regulatory and advisory function for the Government of India on issue of Conservation, sustainable use of Biological Resources and fair and equitable sharing of the benefits arising out of the use of biological resources.

The Biological Diversity Act 2002 mandates implementation through a decentralized system with the NBA focusing on advising the Central Government on matters relating to the conservation of biodiversity, sustainable use of its components and equitable sharing of benefits arising out of the utilization of biological resources; and advising the State Governments in the selection of areas of biodiversity importance to be notified under Sub-Section(1) of section 37 as biodiversity heritage sites and measures for the management of such heritage sites.

The State Biodiversity Boards (SBBs) focus on advising the State Governments, subject to any guidelines issued by the Central Government, on matters relating to conservation of biodiversity, sustainable use of its components and equitable sharing of benefits arising out of the utilization of biological resources.

The SBBs also regulate, by granting of approvals or otherwise requests for commercial utilization of bio-survey and bio-utilization of any biological resource by Indians. The local Biodiversity Management Committees (BMCs) are responsible for promoting conservation, sustainable use and documentation of biological diversity including preservation of habitats, conservation of land races, folk varieties, and cultivars, domesticated stocks and breeds of animals and microorganisms and chronicling of knowledge relating to biological diversity.

The NBA with its headquarters in Chennai, Tamil Nadu, delivers its mandate through a structure that comprises of the Authority, Secretariat, SBBs, BMCs and Expert Committees.

Since its establishment, NBA has supported creation of SBBs in all the 28 States in India and, facilitated establishment of around 33,500 BMCs at local level.

## ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಬಗ್ಗೆ

ಭಾರತೀಯ ಜೀವವೈವಿಧ್ಯ ಅಧಿನಿಯಮ 2002ನ್ನು ಅನುಷ್ಠಾನಗೊಳಿಸಲು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವನ್ನು 2003 ರಂದು ಅಸ್ತಿತ್ವಕ್ಕೆ ತರಲಾಯಿತು. ದೇಶದಲ್ಲಿರುವ ಜೈವಿಕ ಸಂಪನ್ಮೂಲಗಳ ಸಂರಕ್ಷಣೆ, ಸುಸ್ಥಿರ ಬಳಕೆ ಅವುಗಳಿಂದ ದೊರಕುವ ಲಾಭಗಳನ್ನು ನ್ಯಾಯೋಚಿತ ಹಂಚಿಕೆಯ ಸಂಬಂಧದಲ್ಲಿ ಭಾರತ ಸರ್ಕಾರಕ್ಕೆ ಸಹಾಯಕ ಹಾಗೂ ನಿಯಮಿತ ಸಲಹೆಗಳನ್ನು ಕಾಲಕಾಲಕ್ಕೆ ನೀಡಲು ಸರ್ಕಾರದಿಂದ ರಚಿಸಲಾಗಿರುವ (ಶಾಸನಬದ್ಧ) ಸ್ವಯಂಚಾಲಿತ ಸಂಸ್ಥೆಯಾಗಿದೆ.

ವೈವಿಧ್ಯಮಯ ಜೈವಿಕ ಸಂಪನ್ಮೂಲಗಳ ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ಅವುಗಳಿಂದ ಉದ್ಭವವಾಗುವ ಲಾಭಗಳ ನ್ಯಾಯೋಚಿತ ಹಂಚಿಕೆಯ ಬಗ್ಗೆ (ವಿಕೇಂದ್ರಿಕರಣ ತತ್ವದ ಆಧಾರದಲ್ಲಿ) ಕೇಂದ್ರ ಸರ್ಕಾರಕ್ಕೆ ಸಮಯೋಚಿತ ಸಲಹೆಗಳನ್ನು ನೀಡಲೆಂದೇ 2002ರ ಜೈವಿಕ ವೈವಿಧ್ಯ ಅಧಿನಿಯಮದಡಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ರಚನೆಯಾಗಿದೆ.

ಹೇರಳ ಜೈವಿಕ ವೈವಿಧ್ಯತೆಯನ್ನು ಹೊಂದಿರುವ ಮತ್ತು ಪಾರಂಪರಿಕ ಜೀವ ವೈವಿಧ್ಯತೆಯುಳ್ಳ ಪ್ರದೇಶಗಳನ್ನು ಗುರುತಿಸಲು ಮತ್ತು ಅವುಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲು ರಾಜ್ಯ ಸರ್ಕಾರಗಳಿಗೆ ಮಾರ್ಗೋಪಾಯಗಳನ್ನು ಸೂಚಿಸುವುದು ಅದರ ಕರ್ತವ್ಯವಾಗಿದೆ.

ರಾಜ್ಯ ಜೀವವೈವಿಧ್ಯ ಮಂಡಳಿಗಳು ಕೇಂದ್ರ ಸರ್ಕಾರದ ಮಾರ್ಗದರ್ಶನದಲ್ಲಿ ಜೈವಿಕ ಸಂಪನ್ಮೂಲಗಳ ವೈವಿಧ್ಯತೆಯ ಸಂರಕ್ಷಣೆ, ಸುಸ್ಥಿರ ಬಳಕೆ ಹಾಗೂ ನ್ಯಾಯೋಚಿತ ಲಾಭ ಹಂಚಿಕೆಯ ಬಗ್ಗೆ ರಾಜ್ಯ ಸರ್ಕಾರಗಳಿಗೆ ಸಲಹೆ ಮತ್ತು ಸೂಚನೆಗಳನ್ನು ನೀಡುವುದು.

ದೇಶದೊಳಗಣ ಉದ್ಯಮಗಳಿಗೆ ಜೈವಿಕ ಸರ್ವೇಕ್ಷಣೆ ಮತ್ತು ಜೈವಿಕ ಸಂಪನ್ಮೂಲಗಳನ್ನು ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡಲು ಬೇಕಾದ ಒಪ್ಪಿಗೆಯನ್ನು ನೀಡುವುದು ಸ್ಥಳೀಯ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಜವಾಬ್ದಾರಿಯಾಗಿದೆ.

ಜೀವವೈವಿಧ್ಯತೆಯ ಸಂರಕ್ಷಣೆ, ಸುಸ್ಥಿರ ಬಳಕೆ, ದಾಖಲೀಕರಣ, ಆವಾಸಗಳನ್ನು ಕಾಪಾಡುವುದು ಇವುಗಳ ಸುಪರ್ದಿಗೆ ಬರುತ್ತದೆ. ಸ್ಥಳೀಯ ತಳಿಗಳು, ಜನಪದ ತಳಿಗಳು, ಪಳಗಿಸಿದ ಪಶು ತಳಿಗಳು, ಶಿಲೀಂಧ್ರಗಳು ಮತ್ತು ಅವುಗಳ ವೈವಿಧ್ಯತೆಗಳಿಗೆ ಸಂಬಂಧಿಸಿದ ತಿಳುವಳಿಕೆಯ ಸೂಚೀಕರಣಗಳನ್ನು ಸ್ಥಳೀಯ ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ನಿರ್ವಹಿಸಬೇಕಾಗುತ್ತದೆ.

ತಮಿಳುನಾಡಿನ ಚನ್ನೈನಲ್ಲಿರುವ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು, ಪ್ರಾಧಿಕಾರದ ಕಾರ್ಯದರ್ಶಿಯವರ, ರಾಜ್ಯ ಜೀವವೈವಿಧ್ಯ ಮಂಡಳಿಗಳ, ಸ್ಥಳೀಯ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಹಾಗೂ ಪರಿಣಿತರ ಸಮಿತಿಗಳ ಮೂಲಕ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸುತ್ತದೆ.

ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಅಸ್ಥಿತ್ವಕ್ಕೆ ಬಂದ ನಂತರ 28 ರಾಜ್ಯ ಜೀವವೈವಿಧ್ಯ ಮಂಡಳಿಗಳನ್ನು ಮತ್ತು 33,500 ಸ್ಥಳೀಯ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ನಿಯೋಜಿಸಲು ಸಹಕರಿಸಿದೆ.

## About the UNEP –GEF- MoEF ABS Project

The objective of the UNEP –GEF- MoEF Project on Access and Benefit Sharing ABS is to increase the institutional, individual and systemic capacities of stakeholders and to effectively implement the Biological Diversity Act 2002 and the Rules 2004.

This project is the first National project under GEF on ABS and it is implemented in ten states of India namely Andhra Pradesh, Gujarat, Himachal Pradesh, Sikkim, West Bengal, Goa, Karnataka, Odisha, Telangana and Tripura. The project is implemented by NBA in collaboration with ten State Biodiversity Boards, Botanical Survey of India (BSI), Zoological Survey of India (ZSI), United Nations Development Programme (UNDP), United Nations Environment Programme- Division of Environmental Law and Conventions (UNEP/DELC), United Nations University - Institute of Advance studies (UNU-IAS).

The Main components of the Project are

* Identification of biodiversity with potential for ABS and their valuation in the selected ecosystems such as forest, agriculture and wetlands.
* Development of tools, methodologies, guidelines, frameworks for implementing ABS provisions of the Biological Diversity Act, 2002.
* Piloting agreements on ABS.
* Implementation of policy and regulatory frameworks relating to ABS provisions at national level and thereby contribute to international ABS policy issues.
* Capacity building for strengthening implementation of the ABS provisions of the Biological Diversity Act 2002.
* Increase public awareness and educational programme.

## ಸಂಯುಕ್ತ ರಾಷ್ಟ್ರ ವಿಶ್ವವಿದ್ಯಾನಿಲಯ ಉನ್ನತ ಅಧ್ಯಯನ ಸಂಸ್ಥೆ ಮತ್ತು ಜಾಗತಿಕ ಪರಿಸರ ಸೌಲಭ್ಯ, ಬಳಕೆ ಮತ್ತು ಲಾಭಹಂಚಿಕೆ ಒಪ್ಪಂದಗಳ ಯೋಜನೆಯ ಬಗ್ಗೆ

ಈ ಯೋಜನೆಯ ಉದ್ದೇಶವು ಸಂಸ್ಥೆಯ, ಮತ್ತು ಪಾಲುದಾರರ ಸಾಮರ್ಥ್ಯವನ್ನು ಹೆಚ್ಚಿಸಲು, ಜೈವಿಕ ವೈವಿಧ್ಯತೆ ಮತ್ತು ಪರಿಸರ ಸಂರಕ್ಷಣೆಯನ್ನು ಕಾಪಾಡಲು, ಬಳಕೆ ಮತ್ತು ಲಾಭಹಂಚಿಕೆ ಒಪ್ಪಂದಗಳ ಮೂಲಕ, ಜೀವವೈವಿಧ್ಯ ಕಾಯ್ದೆ–2002 ರ ಸಂಬಂಧೀ ಕಾಯ್ದೆ ಮತ್ತು 2004 ರ ನಿಯಮಗಳನ್ನು ಅನುಷ್ಠಾನಕ್ಕೆ ತರುವುದಾಗಿದೆ.

ಈ ಯೋಜನೆಯ ಬಳಕೆ ಮತ್ತು ಲಾಭಹಂಚಿಕೆ ಒಪ್ಪಂದಗಳ ಮೇಲೆ ಜಾಗತಿಕ ಪರಿಸರ ಸೌಲಭ್ಯದ ಅಡಿಯಲ್ಲಿ ಮೊದಲ ರಾಷ್ಟ್ರೀಯ ಯೋಜನೆಯಾಗಿದೆ ಮತ್ತು ಭಾರತದ ಹತ್ತು ರಾಜ್ಯಗಳಲ್ಲಿ ಅಂದರೆ ಆಂಧ್ರ ಪ್ರದೇಶ ಗುಜರಾತ್, ಹಿಮಾಚಲ ಪ್ರದೇಶ, ಸಿಕ್ಕಿಂ, ಪಶ್ಚಿಮ ಬಂಗಾಳ, ಗೋವಾ, ಕರ್ನಾಟಕ, ಒಡಿಶಾ, ತೆಲಂಗಾಣ, ಮತ್ತು ತ್ರಿಪುರದಲ್ಲಿ ಅಳವಡಿಸಲಾಗಿದೆ.

ಈ ಯೋಜನೆಯು ಕರ್ನಾಟಕ ರಾಜ್ಯ ಜೈವಿಕ ವೈವಿಧ್ಯ ಮಂಡಳಿಯ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಧಿಕಾರಿಗಳ ಸಹಯೋಗದೊಂದಿಗೆ, ಮತ್ತು ಇತರ ಸಂಬಂಧೀ ಸಂಸ್ಥೆಗಳಾದ ಭಾರತೀಯ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಸರ್ವೇಕ್ಷಣೆ, ಸಂಯುಕ್ತ ರಾಷ್ಟ್ರ ಪರಿಸರ ಕಾರ್ಯಕ್ರಮ–ಪರಿಸರ ಕಾನೂನು ಒಡಂಬಡಿಕೆ ವಿಭಾಗ, ಅಂತರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ, ಸಂಯುಕ್ತ ರಾಷ್ಟ್ರ ವಿಸ್ವವಿದ್ಯಾನಿಲಯ ಉನ್ನತ ಅಧ್ಯಯನ ಸಂಸ್ಥೆ ಮತ್ತು ಜಾಗತಿಕ ಪರಿಸರ ಸೌಲಭ್ಯ ಇವುಗಳ ಸಹಕಾರದೊಡನೆ ಕಾರ್ಯಗತಗೊಳಿಸಲಾಗುತ್ತದೆ.

### ಯೋಜನೆಯ ಮುಖ್ಯ ಘಟಕಗಳು:

1. ಜೈವಿಕ ವೈವಿಧ್ಯತೆ ಇರುವ ಕಾಡು, ಸಾಗುವಳಿ ಭೂಮಿ ಮತ್ತು ನೀರಾವರಿ ಕ್ಷೇತ್ರವನ್ನು ಗುರುತಿಸುವುದು ಮತ್ತು ಬಳಕೆ–ಲಾಭಹಂಚಿಕೆ ಆಧಾರದಲ್ಲಿ ಅವುಗಳ ಮೌಲ್ಯಮಾಪನೆ.
2. ಜೈವಿಕ ವೈವಿಧ್ಯತೆ ಕಾಯ್ದೆಯಡಿಯಲ್ಲಿ ಬಳಕೆ–ಲಾಭಹಂಚಿಕೆ ನಿಬಂಧನೆಗಳನ್ನು ವ್ಯವಸ್ಥಿಕ ಕಾನೂನು ಉಪಕರಣಗಳನ್ನು, ವಿಧಾನಗಳನ್ನು, ಮಾರ್ಗದರ್ಶಿ ಚೌಕಟ್ಟುಗಳನ್ನು ಅಭಿವೃದ್ಧಿಗೊಳಿಸುವಿಕೆ.
3. ಬಳಕೆ ಮತ್ತು ಲಾಭಹಂಚಿಕೆಯ ಅನ್ವಯ ಪ್ರಾಯೋಗಿಕ ಒಪ್ಪಂದದ ಚಟುವಟಿಕೆಗಳು.
4. ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಬಳಕೆ–ಲಾಭಹಂಚಿಕೆ ನಿಬಂಧನೆಗಳು, ನೀತಿ–ನಿಯಂತ್ರಣ ಚೌಕಟ್ಟುಗಳು, ಮುಂತಾದವುಗಳ ಅನುಷ್ಠಾನ, ಮತ್ತು ಇದರಿಂದ ಅಂತರಾಷ್ಟ್ರೀಯ ಮಟ್ಟದ ಬಳಕೆ–ಲಾಭಹಂಚಿಕೆ ಒಪ್ಪಂದಗಳ ನೀತಿಗಳಿಗೆ ಸಾಧ್ಯವಾದಷ್ಟು ಕೊಡುಗೆ.
5. ಸಾಮರ್ಥ್ಯ ವರ್ಧನೆ ಮತ್ತು ಜೈವಿಕ ವೈವಿದ್ಯತೆ ಕಾನೂನಿನ ಬಳಕೆ ಮತ್ತು ಲಾಭಹಂಚಿಕೆಯ ನಿಬಂಧನೆಗಳನ್ನು ಶಕ್ತಿಯುತವನ್ನಾಗಿ ಮಾಡುವುದು.
6. ಸಾರ್ವತ್ರಿಕ ಜಾಗೃತಿ ಹೆಚ್ಚಿಸುವುದು ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು.



